# ಹಂಪಿ ಟೈಮ್ಸ್
HAMPI TIMES

ಸಂಪಾದಕರು: ಬಸಾಪುರ ಬಸವರಾಜ
EDITOR: BASAPUR BASAVARAJA

ಕನ್ನಡ ದಿನಪತ್ರಿಕೆ
KANNADA DAILY



ಇಂದು ಹಾಗೂ ಹಿಂದಿನ ಹಂಪಿ ಟೈಮ್ಸ್ ಕಲರ್‌ಫುಲ್ ಇ-ದಿನಪತ್ರಿಕೆ ಓದಲುQR ಕೋಡ್ ಸ್ಕ್ಯಾನ್ ಮಾಡಿ ಓದಿರಿ



No.1 Leading in Local News Paper
75,000
HAMPI TIMES E-PAPER READERS
94486 33038
NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201



ಸಂಪುಟ:02 Volume:02 • ಸಂಚಿಕೆ: 23 Issue: 23 • ನೋಂದಣಿ ನಂ.:KARKAN27911 Reg.No:KARKAN27911 • ವಿಜಯನಗರ VIJAYANAGARA • 17.07.2024 • ಬುಧವಾರ Wednesday • ಪುಟ:04 Page:04 • ಬೆಲೆ:2 Rs:2



ಮನಸ್ಸು ಮಾಡು ಕರ್ತವ್ಯ ನಿಷ್ಠನಾಗು ಕಾದು ನೋಡು

ಈ ಬಾರಿ SSLC ವಿದ್ಯಾರ್ಥಿಗಳಿಗೆ ಸುವರ್ಣಾವಕಾಶ!
ವಿದ್ಯಾರ್ಥಿಗಳು ಹೆಚ್ಚು ಅಂಕಗಳಿಸಲು ಸುಲಭ ಮಾರ್ಗೋಪಾಯಗಳು
ದಿನಕ್ಕೊಂದು ವಿಷಯ ಹಂಪಿ ಟೈಮ್ಸ್ ಮಾರ್ಗದರ್ಶಿಯಲ್ಲಿ
SSLC ಪರೀಕ್ಷೆ ವಂಚಿತರು, ಆಕಾಂಕ್ಷಿಗಳು ಹಂಪಿ ಟೈಮ್ಸ್ ದಿನಪತ್ರಿಕೆಯಲ್ಲಿನ ದಿನಕ್ಕೊಂದು ವಿಷಯಗಳನ್ನು ಓದಿಕೊಂಡು ಪರೀಕ್ಷೆಗೆ ಸಿದ್ಧಗೊಳ್ಳಲು ಹಂಪಿ ಟೈಮ್ಸ್ ಮಾರ್ಗದರ್ಶಿ ಸಹಕಾರಿಯಾಗಲಿದೆ... ಇ-ಪೇಪರ್‌ನಲ್ಲೂ ಲಭ್ಯ...

ಹಂಪಿ ಟೈಮ್ಸ್ ಇ-ಪೇಪರ್

94486 33038 www.hampitimes.com / epaper.hampitimes.com Vijayanagara hampitimes@gmail.com



ಹಂಪಿ ಟೈಮ್ಸ್ ಮಾರ್ಗದರ್ಶಿ ಇ-ಪೇಪರ್‌ನಲ್ಲೂ ಲಭ್ಯ ಕೆಳಗಿನ ವಿಳಾಸಕ್ಕೆ ಭೇಟಿ ನೀಡಿ..
www.hampitimes.com
epaper.hampitimes.com


# ಹಿಂದೂ ಮುಸ್ಲಿಂರ ಭಾವೈಕ್ಯತೆ ಹಬ್ಬ ಮೊಹರಂ

■ ಹಂಪಿ ಟೈಮ್ಸ್ ಹೊಸಪೇಟೆ

ನಗರದ ಡ್ಯಾಂ ರಸ್ತೆ, ಚಿತ್ತವಾಡ್ಗಿ ಸೇರಿದಂತೆ ವಿವಿಧೆಡೆ ಮೋಹರಂ ಹಬ್ಬವನ್ನು ಸಂಭ್ರಮ ಸಡಗರಿಂದ ದೇವರಿಗೆ ಲೋಬಾನ, ಸಕ್ಕರೆ ನೈವೇದ್ಯ ಸಲ್ಲಿಸುವ ಮೂಲಕ ಜಿಲ್ಲಾದ್ಯಾಂತ ಸಂಭ್ರಮ ಸಡಗರ, ಹಿಂದೂ ಮುಸ್ಲಿಂ ಭಾವೈಕ್ಯತೆಯಿಂದ ಶ್ರದ್ಧಾಭಕ್ತಿಯಿಂದ ಆಚರಿಸಿದರು.

ಹರಕೆ ಹೊತ್ತ ಕುಟುಂಬದವರು ತಮ್ಮ ಮಕ್ಕಳ ಮೈಗೆ ಹುಲಿಬಣ್ಣ ಹಾಕಿಸಿ ಹರಕೆ ತೀರಿಸಿದರು. ಮೋಹರಂ ಹಬ್ಬದಂಗವಾಗಿ ಬೆಳಿಗ್ಗೆಯಿಂದಲೇ ಭಕ್ತರು ಸರದಿಸಾಲಿನಲ್ಲಿ ನಿಂತು ದೇವರಿಗೆ ಸಕ್ಕರೆ, ಹೂ, ವಸ್ತ್ರ ಸಮರ್ಪಿಸಿ ಭಕ್ತಿ ಸೇವೆ ಸಲ್ಲಿಸಿದರು.

ಹಗರಿಬೊಮ್ಮನಹಳ್ಳಿ ತಾಲೂಕಿನ ಬಲ್ಲಾಹುಣಸಿ, ಕಡಲಬಾಳು, ಮಾಲವಿ, ಹಂಪಾಟ್ಟಣ, ತಂಬ್ರಹಳ್ಳಿ, ಹಂಪಸಾಗರ, ಹನಸಿ, ಉಲವತ್ತಿ, ಕನ್ನಿಹಳ್ಳಿ ಸೇರಿದಂತೆ ನಾನಾ ಕಡೆ ದೇವರುಗಳ ಪ್ರತೀಕ ಮೂರ್ತಿಗಳನ್ನು ಸ್ಥಾಪಿಸಿ, ಈಗಾಗಲೇ 7ನೇ ದಿನ ಸವಾರಿ ಆಚರಿಸಿ, ಬಳಿಕ 9ನೇ ದಿನದಲ್ಲಿ ಹರಕೆ ಹೊತ್ತವರು ಹರಕೆ ತೀರಿಸುತ್ತಾರೆ. ಎಲ್ಲಾ ಸಮುದಾಯದವರು ದರ್ಗಾಗಳಿಗೆ ತೆರಳಿ ಭಕ್ತಿಯ ಸಮರ್ಪಣೆ ಮಾಡುತ್ತಾರೆ. ಕೆಂಡಗಳನ್ನಾಕಿ ಅದರಲ್ಲಿ ಬರೀ ಕಾಲಲ್ಲಿ ನಡೆಯುತ್ತಾರೆ. ಇಂತಹ ಹತ್ತಾರು ಹರಕೆಗಳೊಂದಿಗೆ ಕೊನೇ ದಿನ



ಉಪವಾಸವಿದ್ದು, ಕೆಂಡಕ್ಕೆ ಉಪ್ಪು ಹಾಕಿ, ದೇವರಿಗೆ ಸಕ್ಕರೆ, ಗೋದಿ ಹಿಟ್ಟಿನ ಮಾದಲಿ(ಸಿಹಿ ಪದಾರ್ಥ) ಅರ್ಪಿಸುವ ಮೂಲಕ ಮಂಗಳವಾರ ಮೊಹರಂ



ಕೊನೇ ದಿನ ಕತ್ತಲ ರಾತ್ರಿ ಆಚರಿಸಲು ಸಿದ್ಧತೆಯಲ್ಲಿ ತೊಡಗಿದ್ದಾರೆ. ಬುಧವಾರ ಸಂಜೆ ದೇವರು ಹೊಳೆಗೆ ಹೋಗುವ ಮೂಲಕ ಹಬ್ಬದಾಚರಣೆಯನ್ನು ಸಂಪನ್ನಗೊಳಿಸುತ್ತಾರೆ.

ಏಳನೇ ಶತಮಾನದಲ್ಲಿ, ಮಹಮದ್ ಪೈಗಂಬರರ ಮೊಮ್ಮಕ್ಕಳಾದ ಹುಸೇನ್ ಹಾಗೂ ಅವರ ಸಂಗಡಿಗರು ಯಜೀದನೆಂಬುವವನ ವಿರುದ್ಧ, ಕರ್ಬಲಾ ಮೈದಾನದಲ್ಲಿ ಲಡಾಯಿ ಮಾಡುತ್ತ ಜೀವಬಿಟ್ಟರು. ಇದರ ಶೋಕಾಚರಣೆಯ ಭಾಗವಾಗಿ ಮೊಹರಂ ಆಚರಣೆ ಶುರುವಾಯಿತು. >> 2 ರಲ್ಲಿ

## ಮೊಹರಂ ಜನತೆಯ ಧರ್ಮ

## ಮೈಕ್ರೋ ನ್ಯೂಸ್

### ಸಾಧಕರಿಂದ ಪ್ರಶಸ್ತಿಗಾಗಿ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಕೊಪ್ಪಳ

ಕೊಪ್ಪಳ ಜಿಲ್ಲಾ ವ್ಯಾಪ್ತಿಯಲ್ಲಿ 2024ನೇ ಸಾಲಿಗೆ ಕೇಂದ್ರ ಸರ್ಕಾರವು ವಿಕಲಚೇತನರ ಸಬಲೀಕರಣಕ್ಕಾಗಿ ವಿವಿಧ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವ್ಯಕ್ತಿ ಹಾಗೂ ಸಂಸ್ಥೆಗಳಿಗೆ ರಾಷ್ಟ್ರ ಪ್ರಶಸ್ತಿ ನೀಡಲು ಆನ್‌ಲೈನ್ ಮೂಲಕ ಅರ್ಜಿಗಳನ್ನು ಆಹ್ವಾನಿಸಿದೆ.

ವಿಕಲಚೇತನರ ಸಬಲೀಕರಣಕ್ಕಾಗಿ ವಿವಿಧ ಕ್ಷೇತ್ರಗಳಲ್ಲಿ ಅತ್ಯುತ್ತಮ ಸಾಧನೆ ಮಾಡಿದ ವ್ಯಕ್ತಿ ಹಾಗೂ ಸಂಸ್ಥೆಗಳು ಅಗತ್ಯ ದಾಖಲಾತಿಗಳೊಂದಿಗೆ ಪ್ರಸ್ತಾವನೆಯನ್ನು ಜುಲೈ 31 ರೊಳಗಾಗಿ ಭಾರತ ಸರಕಾರದ ವೆಬ್‌ಸೈಟ್ www.awards.gov.in ನಲ್ಲಿ ಆನ್‌ಲೈನ್ ಮೂಲಕ ಸಲ್ಲಿಸಬಹುದಾಗಿದೆ. ಹಾಗೂ ಆನ್‌ಲೈನ್ ಮೂಲಕ ಸಲ್ಲಿಸಿದ ಪ್ರಸ್ತಾವನೆಗಳನ್ನು ದ್ವಿಪ್ರತಿಯಲ್ಲಿ ಕೊಪ್ಪಳ ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಛೇರಿಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗಾಗಿ ವಿಕಲಚೇತನರ ಮಾಹಿತಿ ಸಲಹಾ ಕೇಂದ್ರದ ದೂರವಾಣಿ ಸಂಖ್ಯೆ:08539–295496ಕ್ಕೆ ಸಂಪರ್ಕಿಸಬಹುದು ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಜು.20ರಂದು ಉದ್ಯೋಗ ಮೇಳ

ಹಂಪಿ ಟೈಮ್ಸ್ ರಾಯಚೂರು

ಇಲ್ಲಿಯ ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ವಿನಿಮಯ ಇಲಾಖೆಯ ವತಿಯಿಂದ ನಗರದ ರೂಡ್ಸ ಎಂ.ಎಸ್. ಡಬ್ಲ್ಯ ಕಾಲೇಜುನಲ್ಲಿ ಇದೇ ಜು.20ರ ಬೆಳಿಗ್ಗೆ 10ರಿಂದ ಮಧ್ಯಾಹ್ನ 02ಗಂಟೆಯವರೆಗೆ ಉದ್ಯೋಗ ಮೇಳವನ್ನು ಆಯೋಜನೆ ಮಾಡಿಲಾಗಿದ್ದು, ಆಸಕ್ತರು ಯುವಕ/ಯುವತಿರು ಭಾಗಹಿಸಬಹುದಾಗಿದೆ ಎಂದು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರದ ಉದ್ಯೋಗಾಧಿಕಾರಿಗಳು ತಿಳಿಸಿದ್ದಾರೆ.

ಮೇಳವು 5 ವಿವಿಧ ಖಾಸಗಿ ಕಂಪನಿಗಳ ಸಹಭಾಗಿತ್ವದಲ್ಲಿ ಆಯೋಜಿನೆ ಮಾಡಲಾಗಿದ್ದು, ತಮ್ಮ ಕಂಪನಿಯಲ್ಲಿ ಖಾಲಿವಿರುವ ಹುದ್ದೆಗಳನ್ನು ನೇರವಾಗಿ ಭರ್ತಿ ಮಾಡಿಕೊಳ್ಳಲಿದ್ದಾರೆ.

ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ, ಪಿ.ಯು.ಸಿ. ಹಾಗೂ ಎಲ್ಲಾ ಪದವೀಧರ ಅಭ್ಯರ್ಥಿಗಳು ಭಾಗವಹಿಸಬಹುದಾಗಿದೆ. 18ರಿಂದ 32ವರ್ಷಗಳವರೆಗಿನ ಅಭ್ಯರ್ಥಿಗಳು ಭಾಗವಹಿಸಬಹುದಾಗಿದೆ.

ಉದ್ಯೋಗವಕಾಶಕ್ಕಾಗಿ ತಮ್ಮ ವಿದ್ಯಾರ್ಹತೆಯ ಅಂಕ ಪಟ್ಟಿಗಳ ಜೆರಾಕ್ಸ್ ಪ್ರತಿಗಳು ಮತ್ತು ತಮ್ಮ ಬಯೋಡಾಟಾ, ಆಧಾರ್ ಕಾರ್ಡ್ ಪ್ರತಿ ಹಾಗೂ ಭಾವಚಿತ್ರಗಳೊಂದಿಗೆ ಭಾಗವಹಿಸಬಹುದಾಗಿದೆ. ಮೇಳದಲ್ಲಿ ಭಾಗವಹಿಸಲು ಯಾವುದೇ ಶುಲ್ಕವಿರುವುದಿಲ್ಲ.

## ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಂದ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ


ಕೇಂದ್ರ ಸರ್ಕಾರದ ಕಾರ್ಮಿಕ ಹಾಗೂ ಉದ್ಯೋಗ ಸಚಿವಾಲಯ, ರಾಜ್ಯ ಕಾರ್ಮಿಕ ಕಲ್ಯಾಣ ಸಂಸ್ಥೆ ವತಿಯಿಂದ ಸರ್ಕಾರಿ ಹಾಗೂ ಖಾಸಗಿ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ಗಣಿ ಕಾರ್ಮಿಕರ, ಬೀಡಿ ತಯಾರಿಕೆ ಮತ್ತು ಚಲನಚಿತ್ರ ಕ್ಷೇತ್ರದ ಮಕ್ಕಳಿಗೆ ವಿದ್ಯಾರ್ಥಿ ವೇತನಕ್ಕಾಗಿ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ಆಗಸ್ಟ್ 31 ಹಾಗೂ ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಅಕ್ಟೋಬರ್ 31 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿರುತ್ತದೆ. ಆಸಕ್ತ ಅಭ್ಯರ್ಥಿಗಳು https://scholarships.gov.in/Students ವೆಬ್‌ಸೈಟ್‌ಗೆ ಭೇಟಿ ನೀಡಿ ಅರ್ಜಿ ಸಲ್ಲಿಸಬಹುದು. ಹೆಚ್ಚಿನ ಮಾಹಿತಿಗಾಗಿ ನಗರದ ಕೌಲ್‌ಬಜಾರ್‌ನ ಬಂಡಿಹಟ್ಟಿ ರಸ್ತೆಯ ಬೆಳಗಲ್ ಕ್ರಾಸ್ ಬಳಿಯ ಎಕ್ಸ್–ಸರ್ವೀಸ್ ಕಾಲೋನಿಯ ನಂ.171 ಐಐಎಂಸಿ ಎಸ್‌ಸಿಎಂ ಕಚೇರಿಗೆ ಸಂಪರ್ಕಿಸಬಹುದು ಎಂದು ಕಾರ್ಮಿಕ ಕಲ್ಯಾಣ ಸಂಸ್ಥೆಯ ವೈದ್ಯಕೀಯ ಅಧಿಕಾರಿ ತಿಳಿಸಿದ್ದಾರೆ.

## ತ್ಯಾಜ್ಯ ನೀರು ದರೋಜಿ ಕೆರೆಗೆ ಜಿಂದಾಲ್ ವಿರುದ್ಧ ಕ್ರಮಕ್ಕೆ ಆಗ್ರಹ

■ ಹಂಪಿ ಟೈಮ್ಸ್ ಬೆಂಗಳೂರು:

ಬಳ್ಳಾರಿ ಜಿಲ್ಲೆಯ ತೋರಣಗಲ್ಲುನ ಕಾಣಿಗನಹಳ್ಳದ ಮೂಲಕ ದರೋಜಿ ಕೆರೆಯನ್ನು ಸೇರುತ್ತಿರುವ ರಸಾಯನಿಕ ನೀರಿನ ಕಾರಣ ಕೆರೆಯ ನೀರು ಮಲಿನಗೊಂಡು ಜಲಚರಗಳು ಸಾಯುತ್ತಿದ್ದು, ಸಾರ್ವಜನಿಕರ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುತ್ತಿದ್ದು, ತಕ್ಷಣವೇ ಈ ನೀರನ್ನು ತಡೆಯಬೇಕು ಎಂದು ವಿಧಾನಪರಿಷತ್ ಸದಸ್ಯ ವೈ.ಎಂ. ಸತೀಶ್ ಅವರು ಆಗ್ರಹಿಸಿದ್ದಾರೆ.



ವಿಧಾನಪರಿಷತ್‌ನಲ್ಲಿ ವಿಷಯ ಪ್ರಸ್ತಾಪ ಮಾಡಿದಾಗ, ಉತ್ತರಿಸಿದ ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಸಚಿವ ಈಶ್ವರ್ ಬಿ. ಖಂಡ್ರೆ ಅವರು, ಜಿಂದಾಲ್ ಕಂಪನಿಯು ರಸಾಯನಿಕ ಮಿಶ್ರಿತ (ಕೆಮಿಕಲ್ ಮಿಶ್ರಿತ) ನೀರನ್ನು ಸಂಸ್ಕರಿಸದೇ ಕಾಣಿಗನ ಹಳ್ಳದ ಮೂಲಕ ದರೋಜಿ ಕೆರೆಗೆ ಬಿಡುತ್ತಿರುವ ಕುರಿತು ಸಾಕಷ್ಟು ದೂರುಗಳು ಬಂದಿವೆ. ಈ ಕುರಿತು ಸರ್ಕಾರ ತಕ್ಷಣವೇ ಕ್ರಮಕೈಗೊಳ್ಳಲು ನೋಟೀಸ್ ಜಾರಿ ಮಾಡಿದ್ದು, ತಕ್ಷಣವೇ ಕ್ರಮಕೈಗೊಳ್ಳಲು ಆದೇಶ ನೀಡಲಾಗಿತ್ತು.

ನೋಟೀಸ್‌ಗೆ ಸ್ಪಂದಿಸಿರುವ ಜಿಂದಾಲ್ ಕಂಪನಿಯು 9000 ಕ್ಯೂಬಿಕ್ ಮೀಟರ್ ಪ್ರಮಾಣದ ನೀರು ಸಂಸ್ಕೃಣಾ ಘಟಕವನ್ನು ಅಳವಡಿಸಿಕೊಂಡಿದೆ. ಅಲ್ಲದೇ, ರಸಾಯನಿಕಯುಕ್ತ ನೀರನ್ನು ಕಾಣಿಗಹಳ್ಳದ ಮೂಲಕ ಹರಿಸದಂತೆ ಅಗತ್ಯ ಕ್ರಮಗಳನ್ನು ಕೈಗೊಂಡಿದೆ. ದರೋಜಿ ಕೆರೆ ಮತ್ತು ಕಾಣಿಗನಹಳ್ಳದಲ್ಲಿ ಹರಿಯುವ ನೀರನ್ನು ಪ್ರತೀ ಮೂರು ತಿಂಗಳಿಗೊಮ್ಮೆ ಪರೀಕ್ಷಿಸಲಾಗುತ್ತಿದೆ ಎಂದು ಸ್ಪಷ್ಟನೆ ನೀಡಿದರು.


SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ
Hampi Times Margadarshi
ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು
SCAN & READ E-PAPER
SSLC MATHS Hampi Times Margadarshi


## ವಾಸ್ತವ ಸಂಖ್ಯೆಗಳು

### ಅಂಕಗಣಿತದ ಮೂಲ ಪ್ರಮೇಯ
(ಮುಂದುವರೆದ ಭಾಗ)

**ಈ ಅಧ್ಯಾಯದಲ್ಲಿ ಪ್ರತಿ ವರ್ಷ 2 ಅಂಕಕ್ಕೆ ಕೇಳುವ ಪ್ರಶ್ನೆ (ತಪ್ಪದೇ ಕಲಿಯಿರಿ)**

**ಉದಾಹರಣೆ 1 : $\sqrt{2}$ ಒಂದು ಅಭಾಗಲಬ್ಧ ಸಂಖ್ಯೆ ಎಂದು ಸಾಧಿಸಿ.**

ಊಹೆ $\sqrt{2}$ ಒಂದು ಭಾಗಲಬ್ಧ ಸಂಖ್ಯೆ ಆಗಿರಲಿ.
$\sqrt{2} = p/q$ ($p, q \in z, q \neq 0$)
ಎರಡೂ ಕಡೆ ವರ್ಗಗೊಳಿಸಿದಾಗ
$2 = \frac{p^2}{q^2}$
$2q^2 = p^2$
$q^2 = = \frac{p^2}{2}$ ---------- (1)
$\Rightarrow 2$, $p^2$ನ್ನು ಭಾಗಿಸಿದಾಗ.
$p = 2m$ ಆಗಿರಲಿ ಇದನ್ನು ಸಮೀಕರಣ(1) ರಲ್ಲಿ ಆದೇಶಿಸಿದಾಗ
$q2 = \frac{(2m)^2}{2} = \frac{4m^2}{2}$
$q^2 = 2m^2$
$\Rightarrow 2$, $q^2$ ನ್ನು ಭಾಗಿಸುತ್ತದೆ,
$\therefore 2$, p ಮತ್ತು q ಗಳ ಸಾಮಾನ್ಯ ಅಪವರ್ತನ
$\therefore \sqrt{2}$ ಒಂದು ಭಾಗಲಬ್ಧ ಸಂಖ್ಯೆ ಎಂಬ ನಮ್ಮ ಊಹೆ ತಪ್ಪು
$\therefore \sqrt{2}$ ಒಂದು ಅಭಾಗಲಬ್ಧ ಸಂಖ್ಯೆ ಆಗಿದೆ.

ನೀವು ಮಾಡಿ ಕಲಿಯಿರಿ
1) $\sqrt{5}$ ಒಂದು ಅಭಾಗಲಬ್ಧ ಸಂಖ್ಯೆ ಎಂದು ಸಾಧಿಸಿ.
2) $\sqrt{3}$ ಒಂದು ಅಭಾಗಲಬ್ಧ ಸಂಖ್ಯೆ ಎಂದು ಸಾಧಿಸಿ.

**ಉದಾಹರಣೆ 2 : $5 + \sqrt{3}$ ಒಂದು ಅಭಾಗಲಬ್ಧ ಸಂಖ್ಯೆ ಎಂದು ಸಾಧಿಸಿ.**

$5 + \sqrt{3}$ ಒಂದು ಭಾಗಲಬ್ಧ ಸಂಖ್ಯೆ ಆಗಿರಲಿ
ಅಂದರೆ , $5 + \sqrt{3} = \frac{a}{b}$ ಆಗುವಂತೆ a ಮತ್ತು b ($b \neq 0$) ಗಳು ಸಹ ಅವಿಭಾಜ್ಯಗಳಾಗಿವೆ.
$\therefore \frac{a}{b} - 5 = \sqrt{3}$
$\sqrt{3} = \frac{a}{b} - 5$
$\sqrt{3} = \frac{a-5b}{b}$
a ಮತ್ತು b ಗಳು ಪೂರ್ಣಾಂಕಗಳಾಗಿರುವುದರಿಂದ $\frac{a-5b}{b}$ ಯು ಭಾಗಲಬ್ಧವಾಗಿದೆ.
ಆದರೆ $\sqrt{3}$ ಒಂದು ಅಭಾಗಲಬ್ಧ ಸಂಖ್ಯೆಯಾಗಿದೆ
$\therefore 5 + \sqrt{3}$ ಒಂದು ಭಾಗಲಬ್ಧ ಸಂಖ್ಯೆ ಎಂಬ ನಮ್ಮ ಊಹೆ ತಪ್ಪು
$\therefore 5 + \sqrt{3}$ ಒಂದು ಅಭಾಗಲಬ್ಧ ಸಂಖ್ಯೆ

ನೀವು ಮಾಡಿ ಕಲಿಯಿರಿ
1) $3 + \sqrt{2}$ ಒಂದು ಅಭಾಗಲಬ್ಧ ಸಂಖ್ಯೆ ಎಂದು ಸಾಧಿಸಿ.
2) $2 + \sqrt{3}$ ಒಂದು ಅಭಾಗಲಬ್ಧ ಸಂಖ್ಯೆ ಎಂದು ಸಾಧಿಸಿ.
3) $\sqrt{2} + \sqrt{3}$ ಒಂದು ಅಭಾಗಲಬ್ಧ ಸಂಖ್ಯೆ ಎಂದು ಸಾಧಿಸಿ.

ನಿನ್ನ ಏಳಿಗೆಗೆ ನೀನೇ ಶಿಲ್ಪಿ

ಮಾರ್ಗದರ್ಶಿ ಶಿಕ್ಷಕರು : ಎಂ.ಎಸ್.ಮಂಜುನಾಥ, ಗಣಿತ ಶಿಕ್ಷಕರು, ಚಿಲಗೋಡು, ಹಗರಿಬೊಮ್ಮನಹಳ್ಳಿ ತಾ, ವಿಜಯನಗರ (ಜಿ)


ಸಾಯಿಮಣಿ ಪ್ರಕಾಶನ, ಹೊಸಪೇಟೆ


## ಮಾತಿಗಿಂತ ಜಾಸ್ತಿ ಇಮೋಜಿಗಳದ್ದೇ ಕಾರುಬಾರು
ಪುಟ 2ರಲ್ಲಿ

## ಅಸುರಕ್ಷಿತ ಬಾಲ್ಯ ಮತ್ತು ಮುಂದಿನ ಬದುಕಿನ ನಿರ್ವಹಣೆ
ಪುಟ 3ರಲ್ಲಿ

## ವಿಜ್ಞಾನ

### ಬೇಸಿಗೆಯಲ್ಲಿ ರಸ್ತೆ ಮೇಲೆ ನೀರಿನ ನೆರಳು ಏಕೆ ಉಂಟಾಗುತ್ತದೆ?

■ **ಆರ್.ಬಿ.ಗುರುಬಸವರಾಜ**

ಬೇಸಿಗೆಯ ರಜೆಯಲ್ಲೊಂದು ದಿನ ತಂದೆಯ ಜೊತೆ ಕಾರಿನಲ್ಲಿ ಹೊರಟ್ಟಿದ್ದ ಕಾರ್ತಿಕ ರಸ್ತೆಯ ಮುಂದಿನ ವಿದ್ಯಮಾನವನ್ನು ಕಂಡು ಬೆರಗಾದ. ರಸ್ತೆಯಲ್ಲಿ ನೀರು ನಿಂತಿರುವುದನ್ನು ಕಂಡು ದಂಗಾದ. "ಪಪ್ಪಾ, ಮಳೆನೇ ಬಂದಿಲ್ಲ, ಆದರೆ ರಸ್ತೆಯ ಮೇಲೆ ನೀರು ನಿಂತಿದೆಯಲ್ಲ" ಎಂದ. 'ಅಯ್ಯೋ ಮಗನೆ, ಅದು ನೀರಲ್ಲ. ಅದನ್ನು ಮರೀಚಿಕೆ ಎನ್ನುತ್ತಾರೆ. ಈಗ ನಾವು ಅಲ್ಲಿಗೆ ಹೋದರೆ ಅಲ್ಲಿ ನೀರು ಇರುವುದಿಲ್ಲ. ಅದೊಂದು ದೃಷ್ಟಿಭ್ರಮೆ ಮಾತ್ರ' ಎಂದರು. ಅಷ್ಟಕ್ಕೆ ಸುಮ್ಮನಾಗದ ಕಾರ್ತಿಕ "ಪಪ್ಪಾ, ಮರೀಚಿಕೆ ಯಾಕೆ ಉಂಟಾಗುತ್ತದೆ" ಎಂದು ಪ್ರಶ್ನಿಸಿದ. ತಂದೆ ಕಾರು ಓಡಿಸುತ್ತಲೇ ಅವನ ಪ್ರಶ್ನೆಗೆ ಉತ್ತರಿಸತೊಡಗಿದರು.

ಮರೀಚಿಕೆ ಎನ್ನುವುದು ಒಂದು ದೃಷ್ಟಿಭ್ರಮೆಯ ವಿದ್ಯಮಾನವಾಗಿದ್ದು, ಬೆಳಕಿನ ಕಿರಣಗಳು ಸಂಪೂರ್ಣ ಆಂತರಿಕ ಪ್ರತಿಫಲನಗೊಂಡ ಸಮಯದಲ್ಲಿಉಂಟಾಗುತ್ತದೆ. ಬೆಳಕಿನ ಕಿರಣಗಳು ನೀರು ಅಥವಾ ಓಯಸಿಸ್ ಗಾಳಿಯಲ್ಲಿ ತೇಲುತ್ತಿರುವಂತೆ ಕಂಡುಬರುವ ಭ್ರಮೆಯನ್ನು ಸೃಷ್ಟಿಸುತ್ತವೆ.



ಮರೀಚಿಕೆಗಳು ವರ್ಷದ ಯಾವುದೇ ಸಮಯದಲ್ಲಿ ಸಂಭವಿಸಬಹುದು. ಆದರೆ ತಾಪಮಾನವು ಹೆಚ್ಚು ಬಿಸಿಯಾಗಿರುವ ಬೇಸಿಗೆಯ ತಿಂಗಳುಗಳಲ್ಲಿ ಹೆಚ್ಚಾಗಿ ಕಾಣುತ್ತವೆ. ಬೇಸಿಗೆಯ ತಿಂಗಳುಗಳಲ್ಲಿ ಭೂಮಿಯು ಸೂರ್ಯನಿಂದ ಬಿಸಿಯಾಗುತ್ತದೆ. ಇದರಿಂದಾಗಿ ನೆಲದ ಬಳಿ ಇರುವ ಗಾಳಿಯು ಬಿಸಿಯಾಗುತ್ತದೆ ಮತ್ತು ಮೇಲಕ್ಕೆ ಏರುತ್ತದೆ. ಇದು ನೆಲದ ಮೇಲೆ ಬಿಸಿ ಗಾಳಿಯ ಪದರವನ್ನು ಸೃಷ್ಟಿಸುತ್ತದೆ. ಪದರದ ಮೇಲೆ ತಂಪಾದ ಗಾಳಿಗಿಂತ ಕಡಿಮೆ ಸಾಂದ್ರತೆಯನ್ನು ಹೊಂದಿರುತ್ತದೆ. ಬೆಳಕು ಬಿಸಿ ಗಾಳಿಯ ಈ ಪದರದ ಮೂಲಕ ಹಾದುಹೋದಾಗ ಅದು ಬಾಗುತ್ತದೆ ಅಥವಾ ವಕ್ರೀಭವನಗೊಳ್ಳುತ್ತದೆ. ಇದು ಚಿತ್ರದ ದೃಷ್ಟಿಭ್ರಮೆಯನ್ನು ಉಂಟುಮಾಡುತ್ತದೆ. ಇದು ಮರೀಚಿಕೆಯಾಗಿ ಕಾಣಬಹುದು.

ಮರೀಚಿಕೆಗಳು ವರ್ಷದ ಯಾವುದೇ ಸಮಯದಲ್ಲಿ ಸಂಭವಿಸಬಹುದಾದರೂ, ಬೇಸಿಗೆಯಲ್ಲಿ ಅವು ಹೆಚ್ಚು ಸಾಮಾನ್ಯವಾಗಿರುತ್ತವೆ. ಏಕೆಂದರೆ ತಾಪಮಾನವು ಬಿಸಿಯಾಗಿರುತ್ತದೆ ಮತ್ತು ಬಿಸಿ ಮತ್ತು ತಣ್ಣನೆಯ ಗಾಳಿಯ ನಡುವಿನ ವ್ಯತ್ಯಾಸವು ಹೆಚ್ಚಾಗಿರುತ್ತದೆ. ಇದರಿಂದಾಗಿ ಬೆಳಕಿನ ವಕ್ರೀಭವನವು ಮರೀಚಿಕೆಯನ್ನು ಸೃಷ್ಟಿಸುತ್ತದೆ.

ಸಾಮಾನ್ಯವಾಗಿ ಮರೀಚಿಕೆಗಳು ಮರುಭೂಮಿ ಪ್ರದೇಶಗಳಲ್ಲಿ ಹೆಚ್ಚು ಗೋಚರಿಸುತ್ತವೆ. ಅಲ್ಲಿನ ಗಾಳಿಯು ತುಂಬಾ ಶುಷ್ಕವಾಗಿರುತ್ತದೆ ಮತ್ತು ವೀಕ್ಷಣೆಗೆ ಕೆಲವು ಅಡಚಣೆಗಳಿರುತ್ತವೆ. ಹಾಗಾಗಿ ಮರೀಚಿಕೆಗಳು ಹೆಚ್ಚಾಗಿ ಗೋಚರಿಸುತ್ತವೆ. ಆದಾಗ್ಯೂ ಇತರ ಪ್ರದೇಶಗಳಲ್ಲಿಯೂ ಮರೀಚಿಕೆಗಳು ಸಂಭವಿಸಬಹುದು. ಬೇಸಿಗೆಯ ಕಾಲದಲ್ಲಿ ಖಾಲಿ ಜಮೀನಿನಲ್ಲಿ, ರಸ್ತೆಯಲ್ಲಿ ಹಾಗೂ ಇನ್ನಿತರೇ ಬಿಸಿ ಮೇಲ್ಮೈಗಳಲ್ಲಿ ಮರೀಚಿಕೆಗಳನ್ನು ಕಾಣಬಹುದು. ಬೇಸಿಗೆಯ ದಿನಗಳಲ್ಲಿ ಅವುಗಳನ್ನು ಹಗಲಿನ ಯಾವುದೇ ಸಮಯದಲ್ಲಿ ನೋಡಬಹುದು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

**ಏಳನೇ ಶತಮಾನದಲ್ಲಿ, ಮಹಮದ್ ಪೈಗಂಬರರ ಮೊಮ್ಮಕ್ಕಳಾದ ಹುಸೇನ್ ಹಾಗೂ ಅವರ ಸಂಗಡಿಗರು ಯಜೀದನೆಂಬುವವನ ವಿರುದ್ಧ, ಕರ್ಬಲಾ ಮೈದಾನದಲ್ಲಿ ಲಡಾಯಿ ಮಾಡುತ್ತ ಜೀವಬಿಟ್ಟರು. ಇದರ ಶೋಕಾಚರಣೆಯ ಭಾಗವಾಗಿ ಮೊಹರಂ ಆಚರಣೆ ಶುರುವಾಯಿತು.**

# ಮೊಹರಂ ಜನತೆಯ ಧರ್ಮ

ಏಳನೇ ಶತಮಾನದಲ್ಲಿ, ಮಹಮದ್ ಪೈಗಂಬರರ ಮೊಮ್ಮಕ್ಕಳಾದ ಹುಸೇನ್ ಹಾಗೂ ಅವರ ಸಂಗಡಿಗರು ಯಜೀದನೆಂಬುವವನ ವಿರುದ್ಧ, ಕರ್ಬಲಾ ಮೈದಾನದಲ್ಲಿ ಲಡಾಯಿ ಮಾಡುತ್ತ ಜೀವಬಿಟ್ಟರು. ಇದರ ಶೋಕಾಚರಣೆಯ ಭಾಗವಾಗಿ ಮೊಹರಂ ಆಚರಣೆ ಶುರುವಾಯಿತು. ಕರ್ಬಲಾ ವೀರರ ಸಾವು ದಾರುಣ ಸಂಗತಿಯಾಗಲು ಕಾರಣ, ಅವರ ತಲೆಕಡಿದು ಮೆರವಣಿಗೆ ಮಾಡಲಾಯಿತು. ಜತೆಯಿದ್ದ ಎಳೆಗೂಸುಗಳು ಕುಡಿಯಲು ನೀರಿಲ್ಲದೆ ಪರಿತಪಿಸುತ್ತ ಸತ್ತರು. ಮಹಿಳೆಯರು ದುಃಖದಿಂದ ಪರಿತಪಿಸಿದರು. ಇದನ್ನು ಜನಪದರು 'ಧರಮಕ ಸತ್ತವರಾ ಕೋಟಿಗೊಬ್ಬ ಜನರಾ, ಆರಾಣ್ಯಾದಾಗ ಅವರಾ ಕಾಣದ ಮೂರು ದಿವಸ ನೀರಾ, ಕುಡದಾರೋ ಕಣ್ಣೀರಾ ಮಕ್ಕಳು ಹುಡುಗರು ಹೆಂಗಸರಾ' ಎಂದು ಹಾಡಿರುವುದುಂಟು. ಇಂತಹ ದುಗುಡದ ನೆನಪಿನಲ್ಲಿ ಹುಟ್ಟಿದ ಧಾರ್ಮಿಕ ಆಚರಣೆಯೊಂದು ಕರ್ನಾಟಕದಲ್ಲಿ ಸಾಂಸ್ಕೃತಿಕ ಆಚರಣೆಯಾಗಿ ರೂಪಾಂತರ ಪಡೆಯಿತು. ಉತ್ತರ ಕರ್ನಾಟದಲ್ಲಿ ಎಲ್ಲ ಧರ್ಮದ ಜಾತಿಯ ಜನರು ಒಟ್ಟಾಗಿ ಆಚರಿಸುವ ಊರಹಬ್ಬವಾಯಿತು. ಹೀಗಾಗಿ ಮುಸ್ಲಿಮರೇ ಇಲ್ಲದ ನೂರಾರು ಊರುಗಳಲ್ಲೂ ಮೊಹರಂ ನಡೆಯುತ್ತದೆ.

ಮೊಹರಂನಲ್ಲಿ ಶೋಕಗೀತೆಯ ರಚನೆ, ಹಾಡಿಕೆ, ಕುಣಿತ, ವೇಷಗಾರಿಕೆ, ಮೆರವಣಿಗೆ, ವಿಶೇಷ ಆಹಾರಗಳ ಆಯಾಮಗಳಿವೆ. ಇದರ ಫಲವಾಗಿ ಕರ್ನಾಟಕದಲ್ಲಿ ಹಾಡು ಕಟ್ಟುವ ಸಾವಿರಾರು ಶಾಹಿರರೂ ಗಾಯಕರೂ ಇದ್ದಾರೆ. ಹೆಜ್ಜೆಕುಣಿತ, ಕೋಡಂಗಿ ಕುಣಿತ, ಡಬಗಳ್ಳಿ ಕುಣಿತ ಮಾಡುವ, ಹುಲಿವೇಷ, ಅಚೊಳ್ಳಿಸೋಗು, ಭಡಂಗ್‌ವೇಷ ಹಾಕುವ ಹರಕೆ ಕಲಾವಿದರಿದ್ದಾರೆ. ನಾನು ಕಂಡಂತೆ, ಬೀಳಗಿ, ಕೆರೂರ ಕುದುರೆಮೋತಿ ಅಗಸನೂರ, ಆಯನೂರು ಯರಗುಪ್ಪಿ ಗೋಕಾಕಫಾಲ್ಸ ಮುದಗಲ್ ಮೊಹರಂ ವಿಶಿಷ್ಟವಾದವು. ಪ್ರತಿಯೊಂದೂ ಊರು ತನ್ನದೇ ಆಚರಣೆಯನ್ನು ರೂಢಿಸಿಕೊಂಡಿದೆ.

ಅಗಸನೂರಿನಲ್ಲಿ ಹತ್ತು ದಿನಗಳ ಕಾಲ ಚಪ್ಪಲಿ ತೊಡುವುದಿಲ್ಲ. ಮಂಚದಲ್ಲಿ ಮಲಗುವುದಿಲ್ಲ. ಬೀಳಗಿಯಲ್ಲಿ ತೇರಿನಂಥ ರಚನೆಗೆ ಹಿಲಾಲುಗಳನ್ನು ಸಿಕ್ಕಿಸಿ ಉರಿವವೃಕ್ಷವನ್ನೇ ಸೃಷ್ಟಿಸುತ್ತಾರೆ. ಆಯನೂರಲ್ಲಿ ಯಜೀದನ ಸಂಕೇತವಾಗಿ ರಾವಣನ ಪ್ರತಿಕೃತಿ ಸುಡುತ್ತಾರೆ; ಅಗಸನೂರಿನಲ್ಲಿ ಅಲಾವಿಯ ಸುತ್ತ ಮಾಡುವ ಹೆಜ್ಜೆ ನೃತ್ಯವು ಅಪೂರ್ವವಾಗಿದೆ. ಕುದುರೆ ಮೋತಿ, ಹೊಸಪೇಟೆ, ಗಜೇಂದ್ರಗಡಗಳು ಹುಲಿ ವೇಷಕ್ಕೆ ಹೆಸರಾಗಿವೆ; ಮುದಗಲ್ಲಿನಲ್ಲಿ ಅಗಲಿದ ಹಸನ- ಹುಸೇನರ ಮಿಲನವಾಗುವ ಆಚರಣೆ ಕಣ್ತುಂಬಿಕೊಳ್ಳಲು ಕೋಟೆಯ ಹೊರಗೆ ಸಾವಿರಾರು ಜನ ಸೇರುತ್ತಾರೆ. ಇಂಡಿ ಕಡೆ ಭಡಂಗ್ ಎನ್ನುವ ಹರಕೆವೇಷ ಹಾಕುತ್ತಾರೆ; ಬಾಗಲಕೋಟೆ-ವಿಜಯಪುರ ಸೀಮೆಯಲ್ಲಿ ಆಫ್ರಿಕನ್ ಸಿದ್ದಿಗಳನ್ನು ನೆನಪಿಸುವ ಅಚೊಳ್ಳಿ-ಬಿಚೊಳ್ಳಿ ಸೋಗುಗಳಿವೆ. ಈ ಸೋಗಿಗೆ ಮುಖಕ್ಕೆ ಕಪ್ಪುಮಸಿ ಬಳಿದು, ಸೊಂಟಕ್ಕೆ ಗಂಟೆ ಕಟ್ಟಿ, ತಲೆಗೆ ಲಾಲಿಕೆಯಾಕಾರದ ಅಲಂಕೃತ ಟೋಪಿ ಧರಿಸುತ್ತಾರೆ. ಮೊಹರಂ ಆಚರಣೆಯ ದಿನಗಳಲ್ಲಿ ಮುಸ್ಲಿಮೇತರರು ಲಾಡಿ ಧರಿಸಿ ಫಕೀರರಾಗುವ ಪದ್ಧತಿಯೂ ಇದೆ. ಮುಸ್ಲಿಮೇತರ ಕುಟುಂಬಗಳು ಐದು ಜನ ಫಕೀರರಿಗೆ ಕರೆದು ಬಿನ್ನಹ ಮಾಡಿಸಿದಲ್ಲದೆ ತಾವು ಉಣ್ಣುವುದಿಲ್ಲ. ಚೋಂಗೆ, ಮಾಲ್ದಿ ಎಂಬ ಸಿಹಿ ಅಡುಗೆ, ಶರಬತ್ತು ಹಾಗೂ ಮೊಸರನ್ನ ಮೊಹರಂ ಮುಖ್ಯ ಅಡುಗೆಗಳು. ಕರ್ಬಲಾ ವೀರರು ಊಟ ನೀರಿಲ್ಲದೆ ಮಡಿದವರಾದ್ದರಿಂದ, ಹಸಿದವರಿಗೆ ಉಣಿಸುವ ಮತ್ತು ಬಾಯಾರಿದವರಿಗೆ ಶರಬತ್ತು ಕುಡಿಸುವ ಪದ್ಧತಿ ರೂಢಿಯಲ್ಲಿದೆ. ಇಂಡಿ ಮತ್ತು ಸೇಡಂ ಭಾಗದಲ್ಲಿ ಕುರಿಬ್ಯಾಟೆ ಕೊಡುವ ಪದ್ಧತಿಯಿದೆ. ಹೀಗೆ ಉತ್ತರ ಕರ್ನಾಟಕದ ಮೊಹರಂ ಬಹುರೂಪಿಯಾಗಿದೆ.





ರಹಮತ್ ತರೀಕೆರೆ
ಲೇಖಕರು, ಸಂಸ್ಕೃತಿ ಚಿಂತಕರು

Hampi Times E-paper
SCAN AND READ



ದೂರದ ಇರಾಕಿನಲ್ಲಿ ಸಾವಿರಾರು ವರ್ಷದ ಹಿಂದೆ ನಡೆದ ಒಂದು ಮಾನವ ದುರಂತವನ್ನು, ತಮ್ಮ ಬೀದಿಯಲ್ಲಿ ನಿನ್ನೆ ಮೊನ್ನೆ ಸಂಭವಿಸಿದ್ದು ಎಂದು ಇನ್ನೊಂದು ದೇಶಕ್ಕೆ, ಕಾಲಕ್ಕೆ ಸಂಸ್ಕೃತಿ ಮತ್ತು ಧರ್ಮಕ್ಕೆ ಸೇರಿದ ಜನಸಮುದಾಯ ಭಾವಿಸಿ ಮಿಡಿಯುವುದೇ ಸೋಜಿಗ. ಇದು ಜನಪದ ಮನಸ್ಸಿನ ಮಾನವೀಯ ಗುಣ. ಇಲ್ಲಿ ಚರಿತ್ರೆಯನ್ನು ಸಮಕಾಲೀನಗೊಳಿಸುವ ಗುಣವೂ ಇದೆ. ವಿಶೇಷವೆಂದರೆ, ಕರ್ಬಲಾ ಹಾಡುಗಳಿಗೆ ದುರಂತದ ವಸ್ತುವಿಗೆ ಸ್ಥಳೀಯ ದುರಂತ ಘಟನೆಗಳೂ ಸೇರಿಕೊಳ್ಳುವುದು. ಬಸ್ಸು ಕಾಲುವೆಗೆ ಉರುಳಿ ಜನ ಸತ್ತದ್ದು, ಎತ್ತುಗಳನ್ನು ರಕ್ಷಣೆ ಮಾಡುತ್ತ ರೈತ ಕಳ್ಳರ ಕೈಲಿ ಕೊಲೆಯಾಗಿದ್ದು, ದುಷ್ಟನಿಂದ ತನ್ನನ್ನು ಕಾಪಾಡಿಕೊಳ್ಳುವ ಅವಸರದಲ್ಲಿ ತಾಯೊಬ್ಬಳು ಕೂಸನ್ನು ಕಳೆದುಕೊಂಡಿದ್ದು, ಗೆಳೆಯನ ಮಡದಿಯನ್ನು ಪ್ರೇಮಿಸಿ ಸ್ವಹತ್ಯೆ ಮಾಡಿಕೊಂಡಿದ್ದು-ಇವೂ ಮೊಹರಂ ಹಾಡುಗಳ ವಸ್ತುಗಳಾಗಿವೆ. ಬೀಳಗಿ ತಾಲ್ಲೂಕಿನ ರೊಳ್ಳಿಯಲ್ಲಿ ಆಲಮಟ್ಟಿ ಡ್ಯಾಂನ ನೀರಿನಲ್ಲಿ ಊರು ಮನೆ ಜಮೀನು ಮುಳುಗಡೆಯಾದ ದುಃಖವನ್ನು ಕೇಳುವವರ ಎದೆಕಲಕುವಂತೆ ಹಾಡಾಗಿ ಹಾಡಿದ್ದರು.

ಮೊಹರಂ ಹಾಡುಪರಂಪರೆ, ಭಾರತೀಯ ಗುರುಪರಂಪರೆಯ ಭಾಗವಾಗಿದೆ. ಶಾಸ್ತ್ರೀಯ ಸಂಗೀತದಲ್ಲಿ ಇರುವಂತೆ, ಇಲ್ಲೂ ಹಾಡಿಕೆ ಕಲಿಯುವ ಶಿಷ್ಯರು ಗುರುವಿನಿಂದ ದೀಕ್ಷೆ ಪಡೆದು ಜತೆಯಲ್ಲಿ ಹಾಡುತ್ತ, ಒಂದು ದಿನ ಗುರುವಿನ ಅನುಮತಿಯಿಂದ ಸ್ವತಂತ್ರವಾಗಿ ಹಾಡುತ್ತಾರೆ; ಹಾಡಿನಲ್ಲಿ ಗುರುವಿನ ಹೆಸರನ್ನು ಸ್ಮರಿಸುತ್ತಾರೆ; ಬೇರೆ ಬೇರೆ ತಂಡಗಳು ಪರಸ್ಪರ ಎದ ಿರಾಗಿ, ಜಿದ್ದಾಜಿದ್ದಿ ಸವಾಲ್-ಜವಾಬ್ ನಡೆಸುತ್ತಾರೆ.

ನರಗುಂದ ತಾಲ್ಲೂಕಿನ ಕೊಣ್ಣೂರಿನಲ್ಲಿ ಸವಾಲ್ ಜವಾಬ್ ಹಾಡಿಕೆಯ ಸ್ಪರ್ಧೆ ನಡೆಯುತ್ತದೆ. ಅದೊಂದು ಬೌದ್ಧಿಕ ಕದನ. ಇದರಲ್ಲಿ ಸೋತವರು ಸಾಯುವ ತನಕ ಹಾಡಿಕೆಗೆ ವಿದಾಯ ಹೇಳಿದ್ದುಂಟು; ಗೆದ್ದವರು ಪದಕ ಧರಿಸಿ, ಜನರಿಂದ ಆಹೇರಿ ಪಡೆದು, ಹೊಲವನ್ನು ಭಕ್ಷೀಸಾಗಿ ಪಡೆದದ್ದುಂಟು. ವೆಂಕಟಬೇನೂರಿನ (ಕಲಬುರ್ಗಿ) ಕಾಕಿಪೀರಾ, ಕದರಮಂಡಲಗಿಯ (ಬ್ಯಾಡಗಿ) ಅಲ್ಲಾಭಕ್ಷ್, ಹುಲಕುಂದದ (ರಾಮದುರ್ಗ) ಭೀಮಕವಿ, ನಿಡಗುಂದದ (ಚಿಂಚೋಳಿ) ಕೆರೂರ ನದಾಫಸಾಬ್ (ಬದಾಮಿ)ಬಸವಂತರಾವ್, ಗೋಕಾಕದ ಭರಮಣ್ಣ ಬೂಶಿ, ಸತ್ತೂರಿನ ಇಮಾಂಸಾಬ್ ಪ್ರಸಿದ್ಧ ಶಾಹಿರರು. ಇಂಡಿ, ಸೇಡಂ, ಬೀಳಗಿ ಭಾಗದಲ್ಲಿ ಮಹಿಳೆಯರು ಗುಂಪಾಗಿ ಕುಳಿತು ಶೋಕಗೀತೆಗಳನ್ನು ಹಾಡುತ್ತಾರೆ. ಈ ಗೀತೆಗಳ ವಸ್ತು, ಅಸಘರನೆಂಬ ಕೂಸಿನ ಸಾವು, ಅಭಿಮನ್ಯುವಿನ ಹಾಗೆ ಚಿಕ್ಕ ಹುಡುಗನಾದ ಕಾಸೀಮ್‌ನನ್ನು ರಣರಂಗಕ್ಕೆ ಕಳಿಸಿಕೊಡುವುದು, ಕಾಸೀಮನ ಮರಣ, ಅವನ ಎಳೆಹೆಂಡತಿ ಸಕೀನಾಳನ್ನು ವಿಧವೆಯಾಗಿಸುವುದು, ಅವಳ ಪ್ರಲಾಪ ಇತ್ಯಾದಿ.

ಮೊಹರಂ ಹಾಡುಗಾರರು ಇಸ್ಲಾಮಿನ ಚರಿತ್ರೆ ಪುರಾಣಗಳಂತೆ, ಮಹಾಭಾರತ, ರಾಮಾಯಣ, ಶಿವಪುರಾಣಗಳಲ್ಲಿಯೂ ಪರಿಣತಿ ಪಡೆದಿದ್ದಾರೆ. ಅವರ ಹಾಡುಗಳಲ್ಲಿ ಯಜೀದ್- ಹುಸೇನರ ಕದನದ ಚರಿತ್ರೆಯು ದೇಸಿ ಪುರಾಣಗಳ ಜತೆ ಬೆರೆತುಬಿಡುತ್ತದೆ. ಬಾಗೇವಾಡಿ ತಾಲ್ಲೂಕಿನಲ್ಲಿ ಪೈಗಂಬರನ್ನು ರಾಮನನ್ನಾಗಿ, ಬೀಬೀ ಫಾತಿಮಾರನ್ನು ಸೀತೆಯನ್ನಾಗಿ, ಹಸನ-ಹುಸೇನರನ್ನು ಲವ-ಕುಶರನ್ನಾಗಿ ಸಮೀಕರಿಸಿ ಹಾಡುತ್ತಾರೆ. ಈ ಹಾಡುಗಳಲ್ಲಿ ಪೈಗಂಬರರನ್ನು ಶರಣ ಎಂದೇ ಕರೆಯಲಾಗಿದೆ. ಬಸವಣ್ಣ, ಮಹದೇವ ಹಾಗೂ ಪೈಗಂಬರ್ ಒಟ್ಟಿಗೇ ಇರುವ ಮಂತ್ರವನ್ನು ಅನೇಕ ಮೊಹರಂ ಮಸೀದಿಯ ತಲೆಬಾಗಿಲಲ್ಲಿ ಕೆತ್ತಲಾಗಿದೆ. ಇಲ್ಲಿರುವ ತತ್ವವೆಂದರೆ, ಲೋಕಹಿತ ಬಯಸುವ ಲೋಕದ ಸಮಸ್ತ ದಾರ್ಶನಿಕರೂ ದೈವಗಳೂ ಮೂಲತಃ ಒಂದೇ ಎಂಬುದು.

ಕರ್ನಾಟಕ ಸಂಸ್ಕೃತಿಯ ವೈಶಿಷ್ಟ್ಯವೆಂದರೆ ಬಹುತ್ವ ಪ್ರಜ್ಞೆ. ಈ ಪ್ರಜ್ಞೆಯು ಪುರಾಣ ಮತ್ತು ಇತಿಹಾಸವನ್ನು ಬೆರೆಸುತ್ತದೆ; ಬೇರೆ ಬೇರೆ ಮತಧರ್ಮದ ಕಥನಗಳಲ್ಲಿರುವ ಸಮಾನ ಅಂಶಗಳನ್ನು ಒಂದೆಡೆ ಜೋಡಿಸುತ್ತದೆ. ಇದು ಭಾರತದ ನಿಜವಾದ ಸಾಂಸ್ಕೃತಿಕ ಪ್ರತಿಭೆ. ಮಧ್ಯಕಾಲೀನ ದೊರೆಗಳು ರಾಜ್ಯವಿಸ್ತರಣೆಗಾಗಿ ಮಾಡಿದ ರಾಜಕೀಯ ಯುದ್ಧಗಳನ್ನೇ ಇರಿಸಿಕೊಂಡು ಚರಿತ್ರೆ ಮತ್ತು ವರ್ತಮಾನವನ್ನು ನೋಡುವವರಿಗೆ, ಜನ ಕಟ್ಟುವ ಈ ಸೃಜನಶೀಲ ಪರಂಪರೆ ತಿಳಿಯುವುದಿಲ್ಲ.



ಮೊಹರಂ ತಾಳಿರುವ ಬಹುರೂಪವು ಸಂಪ್ರದಾಯವಾದಿಗಳನ್ನು ಕಂಗೆಡಿಸುತ್ತದೆ. 'ಇದೆಂತಹ ಧರ್ಮ; ಎಲ್ಲ ಕಲಬೆರಕೆಯಾಗಿದೆ' ಎಂದವರು ಗೊಣಗುವರು. ಆದರೆ ಸಾಮಾನ್ಯ ಜನ ಧರ್ಮ, ಜಾತಿಗಳನ್ನು ಮೀರಿ ಸೃಷ್ಟಿಸಿಕೊಂಡಿರುವ ಅಸ್ಮಿತೆಯಾಗಿ ಮೊಹರಂ ರೂಪುಗೊಂಡಿದೆ. 'ಪ್ರಧಾನ' ಧರ್ಮಗಳು ಸಂಘರ್ಷಕ್ಕೆ ಕಾಲು ಕೆರೆಯುತ್ತಿವೆ; ಪರಸ್ಪರ ಸಂವಾದ ಮಾಡುವ ಬಾಗಿಲು ಕಿಟಕಿಗಳನ್ನು ಮುಚ್ಚಿಕೊಳ್ಳುತ್ತಿವೆ. ಇಂತಹ ಸನ್ನಿವೇಶದಲ್ಲಿ, ಧರ್ಮಗಳ ನಡುವೆ, ಸಂಸ್ಕೃತಿಗಳ ನಡುವೆ ಸಂವಾದ ಸಾಧ್ಯವಿದೆ ಎಂದು ಮೊಹರಂ ತೋರಿಸಿಕೊಡುತ್ತದೆ.

# ಮಾತಿಗಿಂತ ಜಾಸ್ತಿ ಇಮೋಜಿಗಳದ್ದೇ ಕಾರುಬಾರು

ಜುಲೈ 17 ವಿಶ್ವ ಇಮೋಜಿಗಳ ದಿನ. ವಾಟ್ಸ್ ಆ್ಯಪ್, ಫೇಸ್‌ಬುಕ್‌ಗಳಲ್ಲಿ ಮಾತಿಗಿಂತ ಜಾಸ್ತಿ ಇಮೋಜಿಗಳದ್ದೇ ಕಾರುಬಾರು.ಇಮೋಜಿಗಳೇವಾಟ್ಸಪ್ಪಜೀವಾಳ.ಸ್ಮಾರ್ಟ್‌ಫೋನ್‌ಗಳಲ್ಲಿ ಇಮೋಜಿಗಳಂತೂ ಸಖತ್ ಫೇಮಸ್. ನಗು, ಅಳು, ಕೋಪ, ಬೇಜಾರು, ಉತ್ಸಾಹ, ಆಶ್ಚರ್ಯ, ವ್ಯಂಗ್ಯ, ನಾಚಿಕೆ ಇನ್ನಿತರ ಎಲ್ಲಾ ಭಾವನೆಗಳನ್ನು ಪುಟ್ಟ ಇಮೋಜಿಗಳ ಮೂಲಕ ವ್ಯಕ್ತಪಡಿಸಬಹುದು. ವಾಟ್ಸ್ ಆ?ಯಪ್, ಫೇಸ್‌ಬುಕ್ ಮೂಲಕ ಚಾಟ್ ಮಾಡುವಾಗಲೆಲ್ಲ ಟೆಕ್ಸ್ಟ್ ಜತೆ ಭಾವನೆಗಳನ್ನೂ ಅಭಿವ್ಯಕ್ತಿಸಲು ನೆರವಾಗುವ ಪುಟ್ಟ ಗುಂಡು ಮುಖದ ಚಿತ್ರಗಳನ್ನು ಇಮೋಜಿ ಎನ್ನುತ್ತೇವೆ.

ಇದು ವಾಟ್ಸಪ್ಪ ಜೀವಾಳವೇ ಆಗಿದೆ. ಶಬ್ಧಗಳಿಗಿಂತ ವೇಗವಾಗಿ ಭಾವನೆಗಳ ವ್ಯಕ್ತಪಡಿಸುವಲ್ಲಿ ಹೆಚ್ಚು ಜನಪ್ರೀಯವಾಗಿದೆ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುವ ಇಮೊಜಿಗಳು ಟೆಸ್ಟ್ , ಇಮೇಲ್ಗಳು, ಸಾಮಾಜಿಕ ಮಾಧ್ಯಮ ಪೋಸ್ಟ್ಗಳು, ಮತ್ತು ಆನ್ಲೈನ್ ಚಾಟ್ಗಳಂತಹ ಎಲೆಕ್ಟ್ರಾನಿಕ್ ಸಂವಹನದಲ್ಲಿ ವಸ್ತುಗಳು, ಕಲ್ಪನೆಗಳು, ಅಥವಾ ಎಲೆಕ್ಟ್ರಾನಿಕ್ ಸಂವಹನದಲ್ಲಿ ವಸ್ತುಗಳನ್ನು ವ್ಯಕ್ತಪಡಿಸಲು ಬಳಸಲಾಗುತ್ತದೆ. ಇಮೋಜಿಸ್ ವಿಶಾಲ ವ್ಯಾಪ್ತಿಯ ವಿಷಯಗಳನ್ನು ಇರಿಸಬಹುದು ಮುಖದ ಅಭಿವ್ಯಕ್ತಿಗಳು ನಗುಮುಖ ಮುಖ, ದುಃಖ ಮುಖಗಳು ಪ್ರಾಣಿಗಳು ಪಕ್ಷಿಗಳು ಆಹಾರ ಪದಾರ್ಥ ಫಿಜ್ಜಾ, ಐಸ್ ಕ್ರೀಮ್, ಹಣ್ಣು ವಸ್ತುಗಳು ಕಾರುಗಳು, ಫೋನ್ಗಳು, ಪುಸ್ತಕಗಳು – ಚಿಹ್ನೆಗಳು ಉದಾ., ಹಾರ್ಟ್ಸ್, ನಕ್ಷತ್ರಗಳು, ಥಂಬ್ಸ್ ಅಪ್ ಎಮೋಜಿಸ್ 1990 ರ ದಶಕದ ಅಂತ್ಯದಲ್ಲಿ ಜಪಾನ್ನಲ್ಲಿ ಹುಟ್ಟಿಕೊಂಡಿತು ಮತ್ತು ಡಿಜಿಟಲ್ ಸಂವಹನಕ್ಕೆ ದೃಶ್ಯ ಆಸಕ್ತಿ ಮತ್ತು ವ್ಯಕ್ತಿತ್ವವನ್ನು ಸೇರಿಸಲು ಜನಪ್ರಿಯ ಮಾರ್ಗವಾಗಿದೆ. ಕೇವಲ ಪಠ್ಯವನ್ನು ಮಾತ್ರವಲ್ಲ, ಟೋನ್, ಭಾವನೆಗಳನ್ನು ಮತ್ತು ಅರ್ಥವನ್ನು ತಿಳಿಸಲು ಸಹಾಯ ಮಾಡಬಹುದು. ಜನಪ್ರಿಯ ಎಮೋಜಿಸ್ನ ಕೆಲವು ಉದಾಹರಣೆಗಳೆ ಂದರೆ:(ನಗುತ್ತಿರುವ ಮುಖ), (ಸರಿ ಹ್ಯಾಂಡ್ ಸೈನ್) ನಗುತ್ತಿರುವ ಕಣ್ಣಿರಿನ ಮುಖ, (ನಾಯಿ), (ಪಿಜ್ಜಾ) (ಸ್ಪೀಚ್ ಬಲೂನ್) ಸಾವಿರಾರು ಎಮೋಜಿಸ್ ಲಭ್ಯವಿದೆ, ಮತ್ತು ಹೊಸವುಗಳನ್ನು ನಿರಂತರವಾಗಿ ಯೂನಿಕೋಡ್ ಮಾನದಂಡಕ್ಕೆ ಸೇರಿಸುತ್ತವೆ, ಇದು ನಿಯಂತ್ರಿಸಲ್ಪಡುತ್ತದೆ ವಿವಿಧ ಸಾಧನಗಳು ಮತ್ತು ಪ್ಲಾಟ್ಫಾರ್ಮ್ಗಳಲ್ಲಿ ಇಮೋಜಿಸ್ ಬಳಸಲಾಗುತ್ತದೆ.



ಅಂಜಲಿ ಶ್ರೀನಿವಾಸ
ಹುಬ್ಬಳ್ಳಿ


Hampi Times E-paper
SCAN AND READ

ಇಮೋಜಿಸ್ ಡಿಜಿಟಲ್ ಸಂವಹನದಲ್ಲಿ ವ್ಯಾಪಕ ಶ್ರೇಣಿಯ ಬಳಕೆಗಳನ್ನು ಹೊಂದಿದ್ದಾರೆ, ಅವುಗಳೆಂದರೆ: 1. **ಭಾವನಾತ್ಮಕ ಅಭಿವ್ಯಕ್ತಿ** : ಎಮೋಜಿಸ್ ಭಾವನೆಗಳನ್ನು ತಿಳಿಸಲು ಸಹಾಯ ಮಾಡುತ್ತದೆ. 2. **ಟೋನ್ ಮತ್ತು ಸೂಕ್ಷ್ಮತೆ** : ಎಮೋಜಿಗಳು ಪಠ್ಯಕ್ಕೆ ಟೋನ್ ಮತ್ತು ಸೂಕ್ಷ್ಮತೆಯನ್ನು ಸೇರಿಸಬಹುದು, ತಪ್ಪಾಗಿ ಅರ್ಥೈಸಿಕೊಳ್ಳುವುದನ್ನು ತಪ್ಪಿಸಲು ಸಹಾಯ ಮಾಡಬಹುದು. 3. **ಸಾಮಾಜಿಕ ಸೂಚನೆಗಳು** : ಎಮೋಜಿಗಳು ಸಾಮಾಜಿಕ ಸೂಚನೆಗಳಾಗಿ ಸೇವೆ ಸಲ್ಲಿಸಬಹುದು, ಹಾಸ್ಯ, ಚುಚ್ಚುಮಾತು ಅಥವಾ ಗೌರವ ಅಭಿನಂದನೆ ಗಂಭೀರತೆಯನ್ನು ಸೂಚಿಸುತ್ತದೆ . 4. **ವಿಷುಯಲ್ ಬಡ್ಡಿ** : ಎಮೋಜಿಗಳು ಪಠ್ಯಕ್ಕೆ ದೃಶ್ಯ ಆಸಕ್ತಿಯನ್ನು ಸೇರಿಸಿ, ಅದನ್ನು ಹೆಚ್ಚು ಆಕರ್ಷಕವಾಗಿ ಮತ್ತು ಗಮನವನ್ನು ಧರಿಸುತ್ತಾರೆ. 5. **ಕಥೆ ಹೇಳುವದು:** ಎಮೋಜಿಯನ್ನು ಕಥೆಗಳನ್ನು ಹೇಳಲು ಅಥವಾ ಸಂಕೀರ್ಣ ವಿಚಾರಗಳನ್ನು ಸಂಕ್ಷಿಪ್ತ ಮತ್ತು ದೃಷ್ಟಿ ಅಪೇಕ್ಷಿಸುವ ರೀತಿಯಲ್ಲಿ ತಿಳಿಸಲು ಬಳಸಬಹುದು. 6. **ಸಂವಹನ ಶಾರ್ಟ್ಕಟ್ಗಳು** : ಎಮೋಜಿಸ್ ಅನ್ನು ಸಾಮಾನ್ಯ ಪದಗುಚ್ಛಗಳು ಅಥವಾ ಭಾವನೆಗಳನ್ನು ತಿಳಿಸಲು ಶಾರ್ಟ್ಕಟ್ಗಳಾಗಿ ಬಳಸಬಹುದು. 7. **ಭಾವನಾತ್ಮಕ ಬೆಂಬಲ** : ಎಮೋಜಿಸ್ ಅನ್ನು ಭಾವನಾತ್ಮಕ ಬೆಂಬಲ. 8. **ಕ್ರಿಯೇಟಿವ್ ಎಕ್ಸ್ಪ್ರೆಶನ್** : ಎಮೋಜಿಸ್ ಅನ್ನು ಕಲೆ ಅಥವಾ ವಿನ್ಯಾಸದಂತಹ ಸೃಜನಾತ್ಮಕ ರೀತಿಯಲ್ಲಿ ಬಳಸಬಹುದು. 9. **ಭಾಷೆ ಕಲಿಕೆ** : ಭಾಷೆ ಕಲಿಯುವವರಿಗೆ ಸಾಂಸ್ಕೃತಿಕ ಉಲ್ಲೇಖಗಳು ಮತ್ತು ಸೂಕ್ಷ್ಮ ವ್ಯತ್ಯಾಸಗಳನ್ನು ಅರ್ಥಮಾಡಿಕೊಳ್ಳಲು ಸಹಾಯ ಮಾಡಲು ಎಮೋಜಿಸ್ ಅನ್ನು ಬಳಸಬಹುದು. 10. **ಮಾರ್ಕೆಟಿಂಗ್ ಮತ್ತು ಬ್ರ್ಯಾಂಡಿಂಗ್** : ಪ್ರೇಕ್ಷಕರೊಂದಿಗೆ ಸಂಪರ್ಕಿಸಲು ಮತ್ತು ಸ್ನೇಹಿ, ಪ್ರವೇಶಸಾಧ್ಯವಾದ ಟೋನ್ ಅನ್ನು ರಚಿಸಲು ಮಾರ್ಕೆಟಿಂಗ್ ಮತ್ತು ಬ್ರ್ಯಾಂಡಿಂಗ್ನಲ್ಲಿ ಇಮೋಜಿಯನ್ನು ಬಳಸಬಹುದು. ಒಟ್ಟಾರೆಯಾಗಿ, ಇಮೋಜಿಗಳು ಡಿಜಿಟಲ್ ಸಂವಹನದ ಅವಿಭಾಜ್ಯ ಭಾಗವಾಗಿ ಮಾರ್ಪಟ್ಟಿವೆ, ನಮ್ಮ ಆನ್ಲೈನ್ ಸಂವಹನಕ್ಕೆ ವ್ಯಕ್ತಿತ್ವ, ಹಾಸ್ಯ ಮತ್ತು ಭಾವನಾತ್ಮಕ ಆಳವನ್ನು ಸೇರಿಸಲು ಅನುವು ಮಾಡಿಕೊಡುತ್ತದೆ. ಅಂದೊಂದು ಕಾಲವಿತ್ತು ಕಾಗದದಲ್ಲಿ ಅಕ್ಷರಗಳಿಂದ ಭಾವನೆಗಳನ್ನು ರವಾನಿಸಲಾಗುತ್ತಿತ್ತು.ಈಗ ಕ್ಷಣಮಾತ್ರದಲ್ಲಿ ತನ್ನ ಭಾವನೆಗಳನ್ನ ಎಮೋಜಿಗಳಿಂದ ರವಾನಿಸಲಾ ಗುತ್ತದೆ. ಬದಲಾವಣೆ ಜಗದ ನಿಯಮ ಬದಲಾದ ಅಭಿರುಚಿಗಳ ನಡುವೆ ಬದಲಾಗುತ್ತಿರುವ ಬದುಕಿನ ಶೈಲಿ..



## ಕವಿ ಮನಸು

### ಗೋಧೂಳಿ




ಇಳಿ ಸಂಜೆ ಸಮಯವಿದು
ಗೋಧೂಳಿ ಆಗಿಹುದು
ರವಿ ಮನೆಗೆ ಹೋಗುವುದು
ಇರುಳ ತಂಪಿಗೆ ಮುನ್ನುಡಿಯು

ಮಡದಿ ಮಕ್ಕಳು ಮನೆಯಲ್ಲಿ
ಕಾತುರದ ಕಾಯುವಿಕೆ
ಇರುಳಾದರೂ ಬರಲಿಲ್ಲವೇಕೆ
ಬೇಗ ಬರುವೆನೆಂದವರು

ಜಗದ ಎಲ್ಲ ಜೀವ ಸಂಕುಲಕೆ
ಇರುಳೊಂದೆ ವಿಶ್ರಮಕೆ
ಕಾಲ ಚಕ್ರದ ಉರುಳುವಿಕೆ
ಹಳೆಯ ನೆನಪುಗಳ ನೆನೆವುದಕೆ

– ಕೆ ಎಂ ಬಸವರಾಜ ಹೊಸಪೇಟೆ

### ಮಳೆಯ ಸೊಬಗು



ಮಳೆಯ ಸೊಬಗು ನೋಡಲೆಂದು
ಮೆಲ್ಲ ಹೊರಗೆ ಓಡಿದೆ
ಮೈಗೆ ಮುಸುಕಿದ ತಂಡಿಯನ್ನು
ಕೋಣೆಯೊಳಗೆ ಮರೆತಿದೇ

ಧಾರೆಧಾರೆಧಾರೆ ಹರಿದು
ಅಂಗಳವದು ತೋಯ್ದಿದೇ
ಕಾಲುವೆಗಳ ತಳದಡಿಯಲಿ
ಜುಳುಜುಳು ನೀರು ಹರಿದಿದೇ

ಸುತ್ತದಿಟ್ಟೆ ಹಾಯಿಸಿದರೆ
ಸಾಲು ಮೋಡತೇಲಿದೇ
ತಂಪುಗಾಳಿಯೊಡನೆ ತೇಲಿ
ಬಿಡದ ಮಳೆ ಸುರಿದಿದೇ

ಗಿಡಮರಗಳ ಸಾಲುನೋಡು
ಹೊಸಹಸಿರಬಟ್ಟೆ ತೊಟ್ಟಿವೇ
ನೋಡುತಿರಲು ಮಳೆಯ ಸೊಬಗು
ನನ್ನೇ ನಾನು ಮರೆತಿಹೇ

ಹೊಲಹೊಲದಲು ಬಂಗಾರ
ತೆರದಿ ಬೆಳೆಯು ಬೆಳೆದಿದೆ
ಅದೋನೋಡು ದುಡಿದರೈತನ
ಮೊಗದಿ ಸಂತೃಪ್ತನಗೆಯು ಉಕ್ಕಿದೇ

ಕೆರೆಕಟ್ಟೆ ಹೊಳೆಹಳ್ಳವು
ತುಂಬಿತುಂಬಿ ಹರಿದಿವೇ
ಎಂದೂಇಲ್ಲದ ಮಂಜುಳನಿನಾದ
ಕಿವಿಯತುಂಬ ತುಂಬಿದೇ

ಧನ್ಯವಾದ ವರುಣನಿನಗೆ
ಸಕಾಲದಿ ಮಳೆ ತಂದಿಹೇ
ಸಾಲುಹಬ್ಬದಿನದಿ ನಾನು
ನಿನ್ನ ನಿತ್ಯ ನೆನೆಯುವೇ.

– ಅಶೋಕವಿ

### ಹೊಂದಾಣಿಕೆ

ಭುವಿ–ಆಗಸ ಸಮಾನಾಂತರವಾದರೂ,
ಕ್ಷಿತಿಜದಲ್ಲೆಲ್ಲೋ ಒಂದುಗೂಡಿದಂತಹ
ಹೊಂದಾಣಿಕೆ,
ಬಿಂಬ–ಪ್ರತಿಬಿಂಬಗಳ ಅಂದಕ್ಕೆ
ನೆರಳಿನಾಟದ ಹೊದಿಕೆ.
ಕುಟುಂಬದಲ್ಲಿ ವಿಶ್ವಾಸ, ಸಾಮರಸ್ಯದ
ಹೊಂದಾಣಿಕೆ.
ಸತಿ–ಪತಿ ನಡುವೆ ನಂಬಿಕೆ, ಪ್ರೀತಿ,
ಮುನಿಸಿನ ಸಮಭಾವದ ಹೊಂದಾಣಿಕೆ.
"ಸರಾಗವಾದ ಜೀವನಕ್ಕೆ ಹೊಂದಾಣಿಕೆಯ
ಗುಣ,
ಸರಳವಾಗಿ ಸಾಗಿಸುವುದೇ ಅದರ ಹಿರಿತನ"

– ಲೀಲಾವತಿ ವಿಜಯಕುಮಾರ, ಅಂಕಸಮುದ್ರ

# ಅಸುರಕ್ಷಿತ ಬಾಲ್ಯ ಮತ್ತು ಮುಂದಿನ ಬದುಕಿನ ನಿರ್ವಹಣೆ

ನಾನು ನನ್ನ ತಾಯಿಯನ್ನು ತುಂಬಾ ಪ್ರೀತಿಸುತ್ತೇನೆ. ಚಿಕ್ಕಂದಿನಿಂದಲೂ ನನ್ನ ಬದುಕಿನ ಎಲ್ಲಾ ನಿರ್ಧಾರಗಳನ್ನು ನನ್ನ ತಾಯಿಯೇ ತೆಗೆದುಕೊಳ್ಳುತ್ತಿದ್ದಳು. ಇದೀಗ ನಾನು ಬೆಳೆದು ದೊಡ್ಡವನಾಗಿದ್ದರು ನನಗೆ ಯಾವುದೇ ಸ್ವಾತಂತ್ರ್ಯವಿಲ್ಲದಂತಾಗಿದೆ. ನನ್ನಮ್ಮನ ಈ ವಿಪರೀತ ನಡವಳಿಕೆಯಿಂದಾಗಿ ನನಗೆ ಸ್ವಂತ ಜೀವನವೇ ಇಲ್ಲ ಎನಿಸುವಂತಾಗಿದೆ.

ನಾನು ಮತ್ತು ನನ್ನ ಗಂಡ ವಿಚ್ಛೇದನ ತೆಗೆದುಕೊಳ್ಳುತ್ತಿದ್ದೇವೆ... ಏಕೋ ಮದುವೆಗೆ ಮುಂಚೆ ಇದ್ದ ಆಸಕ್ತಿ, ಪ್ರೀತಿ, ಮಾರ್ದವತೆ ನಮ್ಮಿಬ್ಬರ ಸಂಬಂಧದಲ್ಲಿ ಉಳಿದಿಲ್ಲ. ನಮ್ಮಿಬ್ಬರ ನಡುವಿನ ಅಸಹನೆಯಿಂದಾಗಿ ನಾವಿಬ್ಬರೂ ಅಸಂತುಷ್ಟರಾಗಿದ್ದೇವೆ. ನಮ್ಮ ಮನೆಯಲ್ಲಿ ಎಲ್ಲರೂ ನನ್ನ ಅಪ್ಪ ಹಾಕಿದ ಗೆರೆಯನ್ನು ದಾಟುವಂತಿಲ್ಲ. ಮನೆಗೆ ಬೇಕಾಗುವ ತರಕಾರಿಯಿಂದ ಹಿಡಿದು ಟಿವಿ ತರುವವರೆಗೆ, ನಾನು ಧರಿಸುವ ಒಳ ಉಡುಪಿನಿಂದ ಹಿಡಿದು ನನ್ನಮ್ಮ ಧರಿಸುವ ಸೀರೆ ಕುಪ್ಪಸ ಎಲ್ಲವೂ ನನ್ನಪ್ಪನ ಆಯ್ಕೆಯೇ ಆಗಿರಬೇಕು.... ನನಗಂತೂ ಸಾಕಾಗಿ ಹೋಗಿದೆ.

ಇಂತಹ ಮಾತುಗಳನ್ನು ನಾವು ಅಲ್ಲಲ್ಲಿ ಕೇಳಿಯೇ ಇರುತ್ತೇವೆ... ಇದಕ್ಕೆ ಕಾರಣ ಹೀಗೆ ಮಾತನಾಡುತ್ತಿರುವವರು ಅಸುರಕ್ಷಿತ ಬಾಲ್ಯವನ್ನು ಅನುಭವಿಸಿದವರು. ಒಡೆದ, ಮುರಿದ ಮನಸ್ಸುಗಳ ಪಾಲಕರ ಮಕ್ಕಳು. ಅವರೊಳಗಿನ ಬಾಲ ಮನಸ್ಸು ಹೀಗೆ ಕಿರಿಕಿರಿ ಅನುಭವಿಸಲು ಕಾರಣ ಅವರು ಬಾಲ್ಯದಲ್ಲಿ ಅನುಭವಿಸಿದ ನೋವು, ನಿರಾಶೆ ಮತ್ತು ಸಂಕಟಗಳು. ತಮ್ಮ ಪಾಲಕರು ಮಾತನಾಡುವ ಮಾತುಗಳ ಶಿಕಾರಿಗಳು ಈ ಮಕ್ಕಳಾಗಿರುತ್ತಾರೆ. ಪತಿ–ಪತ್ನಿಯರಲ್ಲಿ ಪತ್ನಿ... ನಾನು ನಿನಗಾಗಿ, ಮಕ್ಕಳಿಗಾಗಿ, ಈ ಮನೆಗಾಗಿ ನನ್ನ ಜೀವವನ್ನೇ ತೇದಿರುವೆ, ಆದರೂ ನಾನು ನಿನಗೆ ಹೊರೆ ಎಂದು ನೀನು ಭಾವಿಸುತ್ತಿರುವೆ ಎಂದು ಹೇಳಿದಾಗ ಅದಕ್ಕೆ ಉತ್ತರವಾಗಿ ಪತಿ ನಾನೇನು ಕಡಿಮೆ ಮಾಡಿದ್ದೇನೆಯೇ? ಬೆಳಗಿನಿಂದ ಸಂಜೆಯವರೆಗೂ ಕತ್ತೆಚಾಕರಿ ಮಾಡಿ ದುಡಿದು ನಿಮಗೋಸ್ಕರ ತಂದು ಹಾಕಿಲ್ಲವೇ? ಸ್ವಲ್ಪವಾದರೂ ಕೃತಜ್ಞತೆ ನಿನಗೆ ಇದೆಯೇ? ಎಂದು ಮರು ಪ್ರಶ್ನಿಸುತ್ತಾನೆ.

ಸಾಮಾನ್ಯವಾಗಿ ಎಲ್ಲರ ಮನೆಗಳಲ್ಲಿ ಕಂಡು ಬರುವ ದೃಶ್ಯದಂತೆ ತೋರಿದರೂ ಇದು ಸತಿಪತಿಗಳು ಅನುಭವಿಸುವ ಅವರಿಬ್ಬರ ನಡುವಿನ ಪರಸ್ಪರ ಅವಲಂಬನೆಯ ಆಘಾತ. ಜೊತೆಗಿದ್ದೂ ಕೂಡ ಮಾನಸಿಕವಾಗಿ ಉಳಿದುಹೋಗುವ ಅಂತರ.

ಪಾಲಕರ ಕುರಿತು ನಾವಿಲ್ಲಿ ನಿರ್ಣಯಾತ್ಮಕವಾಗಿ ಮಾತನಾಡುವುದು ಬೇಡ, ಅವರವರು ಅನುಭವಿಸಿರುವ ನೋವು, ಸಂಕಟಗಳು ಅವರವರ ಸ್ವತ್ತುಗಳು ಮಾತ್ರ... ಅವುಗಳ ಫಲಿತಾಂಶದಿಂದ ನಾವು ಪಾಠ ಕಲಿತರೆ ಸಾಕು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Hampi Times E-paper
SCAN AND READ

ಇನ್ನು ನಮ್ಮನ್ನು ನಾವು ಅಸಂತುಷ್ಟ ಮಕ್ಕಳು ಎಂದು ಕೂಡ ಹೇಳಿಕೊಳ್ಳಲು ಸಾಧ್ಯವಿಲ್ಲ ಏಕೆಂದರೆ ಚಿಕ್ಕಂದಿನಲ್ಲಿ ನಾವು ಅನುಭವಿಸಿರುವ ಕೆಲ ಭಯ, ನೋವು ಮತ್ತು ನಿರಾಶೆಗಳು ನಮ್ಮಲ್ಲಿ ಬದುಕಿನ ಕುರಿತು ಭ್ರಮನಿರಸನವನ್ನು ಉಂಟು ಮಾಡಿರಬಹುದು... ಮುಂದಿನ ಬದುಕು ಕೂಡ ಹೀಗೆಯೇ ಇರಬೇಕು ಎಂದಿಲ್ಲ, ನಮ್ಮ ಬದುಕಿನ ಹಣೆಬರಹವನ್ನು ಬದಲಿಸುವ ಹಕ್ಕು ಮತ್ತು ಸ್ವಾತಂತ್ರ್ಯ ನಮಗೆ ಇದ್ದೇ ಇದೆ.

ಪಾಲಕತ್ವದ ಜವಾಬ್ದಾರಿಯಲ್ಲಿ ಮಕ್ಕಳ ಅರಿವಿಗೆ ಬಾರದಂತೆ ಪತಿ–ಪತ್ನಿಯರ ನಡುವೆ ಗುದ್ದಾಟ ಇರಬೇಕು. ಬಹಿರಂಗವಾಗಿ ಪ್ರೀತಿಸಲು ನಮ್ಮ ಸಭ್ಯತೆಯಲ್ಲಿ ಹೇಗೆ ಸಾಧ್ಯವಿಲ್ಲವೋ ಹಾಗೆಯೇ ಜಗಳಗಳು ಕೂಡ ಬಹಿರಂಗವಾಗಿ ನಡೆದರೆ ಸೂಕ್ಷ್ಮ ಮನಸ್ಸಿನ ಮಕ್ಕಳು ಇದರಿಂದ ನೊಂದುಕೊಳ್ಳಬಲ್ಲವು. ಇದು ಅವರ ಭವಿಷ್ಯದ ದಾಂಪತ್ಯದ ಮೇಲೆ ಕೆಟ್ಟ ಪರಿಣಾಮವನ್ನು ಬೀರುತ್ತದೆ. ಅದರ ಫಲವೇ ಲೇಖನದ ಮೊದಲ ಮಾತುಗಳು.

ಇಂತಹ ಕಠಿಣ ಪಾಲಕರ ನಡುವೆ ಬೆಳೆದ ಮಕ್ಕಳಲ್ಲಿ ಹೊಂದಾಣಿಕೆಯ ಕೊರತೆ ಎದ್ದು ಕಾಣುತ್ತದೆ, ಜೊತೆಗೆ ಎಲ್ಲದಕ್ಕೂ ನಾನೇ ಏಕೆ ಸೋಲಬೇಕು? ಎಂಬ ಅಹಂಭಾವ ಕೂಡ. ಸಮಸ್ಯೆಗಳು ತಮ್ಮ ಕಬಂಧ ಬಾಹುಗಳಿಂದ ಅವರನ್ನು ಆವರಿಸಿಕೊಳ್ಳುವ ಮುನ್ನವೇ ಅಂಥವರು ತೆಗೆದುಕೊಳ್ಳುವ ಎಚ್ಚರಿಕೆಗಳು ಹೀಗಿವೆ ನಿಮ್ಮ ಪಾಲಕರು ತಮ್ಮ ಸಮಸ್ಯೆಗಳನ್ನು ನೀವು ಬಗೆಹರಿಸಲಿ ಎಂದು ನಿಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದರೆ ಅವರ ಸಮಸ್ಯೆ ಎಂದೂ ಪರಿಹಾರವಾಗುವುದಿಲ್ಲ... ಏಕೆಂದರೆ ಅವರಿಗೆ ಸಹಾಯ ಮಾಡುತ್ತಿರುವವರು ನೀವು. ಕಾರಣವಿಷ್ಟೇ ಅವರು ತಮ್ಮ ತೊಂದರೆಗಳನ್ನು ನಿಮ್ಮ ಮುಂದೆ ಹೇಳಿಕೊಳ್ಳಲು ಕಾರಣ ತಮ್ಮನ್ನು ತಾವು ಸುರಕ್ಷಿತ ಎಂದು ಭಾವಿಸಲು ನೀವು ಕೂಡ ಅವರ ತೊಂದರೆಯ ಭಾಗವಾಗಲಿ ಎಂದು, ಜಗಳದಲ್ಲಿ ಅವರ ಪರ ನಿಲುವು ತೆಗೆದುಕೊಳ್ಳಲಿ ಎಂಬ ಆಶಯದಿಂದ ಮಾತ್ರ. ಇಂತಹ ಬಾಲ್ಯವನ್ನು ಹೊಂದಿದ ಮಕ್ಕಳು ತಮ್ಮ ಯೌವನದಲ್ಲಿ ವಿಫಲ ದಾಂಪತ್ಯ, ಜಗಳ, ಅಮ್ಮನ ಅಳು ಅಪ್ಪನ ದುಶ್ಚಟಗಳನ್ನು ಕಂಡಿದ್ದು ಎಷ್ಟೋ ಬಾರಿ ವಿವಾಹದ ನೆರಳನ್ನು ಕಂಡು ಕೂಡ ಹೆದರುವಂತೆ ಆಗುತ್ತಾರೆ.

ಏಕೆಂದರೆ ನಮ್ಮಲ್ಲಿ ಜಗಳಗಳನ್ನು ಬಹಿರಂಗವಾಗಿ ಮಾಡುವಂತೆ ಪತಿ ಪತ್ನಿಯರು ಪ್ರೀತಿಯನ್ನು ಬಿಡಿ,ಬಹಿರಂಗವಾಗಿ ಕ್ಷಮೆ ಕೇಳುವುದಕ್ಕೂ ಕೂಡ ಮುಜುಗರ ಪಡುತ್ತಾರೆ. ಇದರ ಪರಿಣಾಮವಾಗಿ ಮಕ್ಕಳಲ್ಲಿ ಕೇವಲ ತಮ್ಮ ಪಾಲಕರ ಜಗಳಗಂಟಿತನದ ತಾಪ ಕಾಣುತ್ತದೆಯೇ ಹೊರತು ಅದರ ಹಿಂದಿನ ಪ್ರೀತಿ ಪ್ರೇಮಗಳಲ್ಲ. ಇಂತಹವರು ಯೌವನಕ್ಕೆ ಬಂದಾಗ ತಮ್ಮ ಪಾಲಕರಿಗೆ ಬುದ್ಧಿ ಹೇಳಿ ತಿದ್ದುವುದು ಬೇಡ... ಬದಲಾಗಿ ತಮ್ಮ ಪಾಲಕರ ಬದುಕಿನಂತೆ ತಮ್ಮ ಬದುಕು ಆಗದಿರುವಂತೆ ಎಚ್ಚರ ವಹಿಸಿದರೆ ಸಾಕು. ಕಠಿಣ ಬಾಲ್ಯವನ್ನು ಹೊಂದಿದ ಮಕ್ಕಳು ತಮ್ಮಲ್ಲಿರುವ ಒಂದೊಂದೇ ಬಲಹೀನತೆಗಳನ್ನು ಗುರುತಿಸಿ ಬರೆದಿಟ್ಟುಕೊಳ್ಳಬೇಕು ತಮ್ಮ ಬಲಹೀನತೆಗಳು ಯಾವ ಕ್ಷಣದಲ್ಲಿ ಹೆಚ್ಚು ವಿಜೃಂಭಿಸುತ್ತವೆ ಎಂಬುದನ್ನು ಕಂಡುಕೊಳ್ಳಬೇಕು.ನಿಧಾನವಾಗಿ ಆ ಬಲಹೀನತೆಗಳನ್ನು ಮೆಟ್ಟುವ,ದಮನಿಸುವ ಕ್ರಿಯೆಯಲ್ಲಿ ತೊಡಗಬೇಕು. ಒಂದು ಬಾರಿ ದಮನಿಸುವ ಕ್ರಿಯೆ ಪ್ರಾರಂಭವಾದರೆ ನೀವು ನಿಜವಾಗಿಯೂ ಮಾನಸಿಕವಾಗಿ ಬಲಿಷ್ಠರಾಗುತ್ತಾ ಹೋಗುತ್ತೀರಿ.. ಮತ್ತು ನಿಮಗೆ ನೀವೇ ಹೆಚ್ಚಿನ ಮಿತಿಗಳನ್ನು ಹಾಕಿಕೊಂಡು ಅವುಗಳನ್ನು ಸಾಧಿಸುತ್ತಾ ಹೋಗುವಿರಿ, ಒಂದೆರಡು ಬಾರಿ ನಿಮ್ಮ ಪ್ರಯತ್ನ ವಿಫಲವಾದರೂ ಖಿನ್ನತೆಗೆ ಒಳಗಾಗದೆ, ಬೇಸರಪಟ್ಟುಕೊಳ್ಳದೆ ಈಗಾಗಲೇ ಕಲಿತ ಪಾಠದ ಅನುಭವದ ಮೇಲೆ ನೀವು ಮತ್ತೆ ಪ್ರಯತ್ನವನ್ನು ಮುಂದುವರಿಸಿ ನಿಮ್ಮ ಕಾರ್ಯದಲ್ಲಿ ಸಫಲತೆಯನ್ನು ಪಡೆಯುವಿರಿ.



ನಿಮ್ಮ ಬದುಕನ್ನು ನಿಮಗೆ ಬೇಕಾದಂತೆ ರೂಪಿಸಿಕೊಳ್ಳುವ ಎಲ್ಲಾ ಹಕ್ಕುಗಳು ಮತ್ತು ಸಾಮರ್ಥ್ಯ ನಿಮ್ಮಲ್ಲಿದೆ... ಅದರ ಸದುಪಯೋಗ ಮಾಡಿಕೊಳ್ಳುವ ಮೂಲಕ ನಿಮ್ಮೆಲ್ಲಾ ಬಲಹೀನತೆಗಳನ್ನು ಮೆಟ್ಟಿ ಸುಂದರ ನೆಮ್ಮದಿಯುತ ಜೀವನ ನಿಮ್ಮದಾಗಿಸಿಕೊಳ್ಳಿ.

# ವ್ಯಕ್ತಿಗೆ ಸಾವಿದೆ ವ್ಯಕ್ತಿತ್ವ ಯಾವತ್ತು ಅಮರ

ನಮ್ಮ ಉಡುಗೆ, ಮಾತನಾಡುವ ಶೈಲಿ, ಇತರರೊಂದಿದೆ ನಮ್ಮ ಸಂಪರ್ಕ, ನಮ್ಮ ಭಾವನೆಗಳು, ನಾವು ಬದುಕುವ ರೀತಿ ಎಲ್ಲವನ್ನು ಒಟ್ಟಾಗಿ ವ್ಯಕ್ತಿತ್ವ ಅಂತ ಕರೆಯುತ್ತೇವೆ".

ನಮ್ಮ ಹೆಸರು ಹೇಳಿದಾಗ ಹೆಸರಿನಿಂದ ವ್ಯಕ್ತಿತ್ವ ಎದುರಿಗೆ ಬರುವುದು.
ಡಾ. ಬಾಬಾಸಾಹೇಬ ಅಂಬೇಡ್ಕರ "ಇತಿಹಾಸ ಮರೆತವರು ಇತಿಹಾಸವನ್ನು ಸೃಷ್ಟಿಸಲಾರರು ".
ಮಹಾತ್ಮ ಗಾಂಧಿ" ಸತ್ಯ ಅಹಿಂಸೆ"
ಸರ್.ಎಂ.ವಿಶ್ವೇಶ್ವರಯ್ಯ"ಸಮಯವೆ ಹಣ"
ಡಾ. "ರಾಜಕುಮಾರ್ ಅಭಿಮಾನಿಗಳೆ ನಮ್ಮನೆದೇವ್ರು" ಹೀಗೆ ವ್ಯಕ್ತಿಯ ಹೆಸರು ಹೇಳಿದ ತಕ್ಷಣ ಅವರ ವ್ಯಕ್ತಿತ್ವ ಕಣ್ಣೆದಿರಿಗೆ ಬಂದು ನಿಲ್ಲುತ್ತದೆ.
ರಾತ್ರಿ ಟಿವಿ ಎದುರಿಗೆ ಕುಳಿತು ಊಟ ಮಾಡುತ್ತಿರಲು, ಅಪರ್ಣಾ ಸಾವಿನ ಸುದ್ದಿ ಬಿತ್ತರಿಸುತ್ತಲೆ, ಅಯ್ಯೊ ಇನ್ನೊಂದು ಜೀವ ನಮ್ಮನ್ನಗಲಿ ಹೋಗಿದೆಯೇ? ಎಂದು ಕುಟುಂಬ ವರ್ಗದಲ್ಲಿ ಚರ್ಚೆಗಳು ಆರಂಭವಾದವು ಅಪರ್ಣಾ ಅಗಲಿಕೆಯ ನೋವು ದುಃಖ ಇಡೀ ಕರ್ನಾಟಕದ ಮನೆ ಮನೆಗಳಲ್ಲಿ ಆವರಿಸಿ ಬಿಟ್ಟಿತ್ತು. ನಮ್ಮ ಅಪರ್ಣಾ ಇನ್ನೂ ಚಿಕ್ಕವಳು, ಇವಳ ಮಧುರ ಕಂಠ, ವಾಕ್ ಚಾತುರ್ಯ, ಮಾತನಾಡುವ ಶೈಲಿ, ಅಪ್ಪಟ್ಟ ಕನ್ನಡತಿ ಇವರ ಕನ್ನಡ ಅಭಿಮಾನಕ್ಕೆ ಇಡೀ ಕನ್ನಡ ನಾಡೇ ಸೋತಿದೆ. ಭಾಷೆ ಯಾವುದಾದರೇನು? ಅಭಿಮಾನ ಮುಖ್ಯ, ಭಾಷೆಯ ಮೇಲೆ ಹಿಡಿತ, ಅದನ್ನು ಫಾಸಿನೆಟ್ ಆಗಿ ಬಳಸುವ ಕಲೆ ಎಲ್ಲರಿಗೂ ನಿಲುಕದು. ನಿರೂಪಣೆ ಎಂದರೆ ಅಪರ್ಣಾ, ಅಪರ್ಣಾ ಎಂದರೆ ನಿರೂಪಣೆ...



ನಂದಿನಿ ಸನಬಾಲ್
ಶಿಕ್ಷಕಿ, ಗುಲ್ಬರ್ಗಾ

Hampi Times E-paper
SCAN AND READ



ನಿರೂಪಣೆಗಾಗಿಯೇ ಮಾಡಿಟ್ಟ ಅಪರ್ಣಾರ ಸುಮಧುರವಾದ ಕಂಠಕ್ಕೆ ಮಾರುಹೋಗದ ವ್ಯಕ್ತಿಯೇ ಇಲ. ಪರ ಭಾಷೆಗೆ ಅವಕಾಶ ಕೊಡದೆ ಅಚ್ಚುಕನ್ನಡದಲ್ಲಿಯೇ ನಿರೂಪಣೆ ಮಾಡಿದ ನಿರೂಪಕಿ.ರೆಲ್ವೆ ಸ್ಟೇಷನ್, ಬಸ್ ಸ್ಟಾಂಡ್, ರೇಡಿಯೋ ಕಾರ್ಯಕ್ರಮ, ಟಿವಿ ಗಳಲ್ಲಿ, ಸರಕಾರಿ, ಅನೇಕ ಖಾಸಗಿ ಕಾರ್ಯಕ್ರಮಗಳಲ್ಲಿ ನಿರೂಪಣೆ ಅನೇಕ ಜಾಹಿರಾತುಗಳಲ್ಲಿ ಇವರದ್ದೆ ಧ್ವನಿ, ನಟನೆ ಹಾಡು ಮಜಾ ಟಾಕೀಸ್ನಲ್ಲಿ ಹಾಸ್ಯ ಕಲಾವಿದೆಯಾಗಿ ಕಾಣಿಸಿಕೊಂಡರು, ವಿವಿಧ ಕಲೆಗಳಲ್ಲಿ ಪೋಳಗಿದ ಕಲಾ ಪ್ರವೀಣೆ. ಸರಳ ವ್ಯಕ್ತಿತ್ವ, ಅಹಂಕಾರವಿಲ್ಲದ ಇವರ ಜೀವನ ಶೈಲಿ ಕನ್ನಡಿಗರ ಮನೆ ಮನಗಳಲ್ಲಿ ನೆಲೆಯೂರಿದೆ. ಸೌಂದರ್ಯವಂತಿ, ಗುಣವಂತಿ ಅಪರ್ಣಾಳನ್ನು ನೋಡಿ ಆ ವಿಧಿಗೂ ಅವರ ಕಂಠದ ಮೇಲೆ ಅಸೂಯೆ ಅಲ್ವಾ ಅವರಿಗೆ ಶ್ವಾಸಕೊಸದ ಕ್ಯಾನ್ಸರ್ ಬಂತು, ಸಾವಿನ ಕೊನೆಯ ಕ್ಷಣದವರೆಗೂ ನಿರೂಪಣೆ ಮಾಡಿದ ಅಪರ್ಣಾ ನಿಧನವಾದರೂ ಕೂಡ ಅವರ ವ್ಯಕ್ತಿತ್ವಕ್ಕೆ ಸಾವಿಲ್ಲ. ವ್ಯಕ್ತಿತ್ವಕ್ಕೆ ಎಷ್ಟು ಬೆಲೆ ಇದೆ ನೋಡಿ ಇನ್ನೊಂದು ಉದಾಹರಣೆ,ಇತ್ತೀಚಿನ ದಿನಗಳಲ್ಲಿ ತುಂಡು ಉಡುಗೆ ಗ್ಲಾಮರ್ ಲುಕ್ಕಿಂದ ಅಪಾರ ಅಪಾರ ಅಭಿಮಾನಿಗಳನ್ನು ಹೊಂದಿರುವ ಅನೇಕ ಸೆಲೆಬ್ರೇಟಿಗಳು ಕೂಡ ಒಂದು ಕಡೆ, ಇನ್ನೊಂದು ಕಡೆ ಸೌಂದರ್ಯ ಗ್ಲಾಮರ್ ಉಡುಗೆ ನೋಡಲು ಕಾತುರದಿಂದ ಕಾಯುವ ಜನ, ಆದರೂ ಕೂಡ ಮೊನ್ನೆ ಅಶ್ವಿನಿ ಪುನೀತರಾಜಕುಮಾರ್ ತಮ್ಮ ಮಕ್ಕಳ ಜೊತೆಗೆ ಕಾರ್ಯಕ್ರಮ ಒಂದರಲ್ಲಿ ಗ್ಲಾಮರ್ ಉಡುಗೆಯಲ್ಲಿ ಭಾಗವಹಿಸಿದ ವಿಡಿಯೋ ಮಾಧ್ಯಮಗಳಲ್ಲಿ ಬಿತ್ತರವಾಗುತ್ತಿದ್ದಂತೆ ಡಾ. ಪುನೀತ್ ರಾಜಕುಮಾರ್ ಅಭಿಮಾನಿಗಳ ಕಾಮೆಂಟ್ ಹೇಗೆ ಬಂದಿದೆ ನೋಡಿ" ಅಶ್ವಿನಿ ಮೇಡಂ ನಾವು ಪುನೀತ್ ಸರ್ ಮಕ್ಕಳನ್ನು ಈ ತರಹದ ಉಡುಗೆಯಲ್ಲಿ ನೋಡಲು ಬಯಸುವುದಿಲ್ಲ, ನೀವು ಕೂಡ ಈ ತರಾ ಉಡುಗೆ ಹಾಕಿಕೊಳ್ಳಬೇಡಿ, ದೊಡ್ಮನೆ ಮಕ್ಕಳಿಗೆ ಶೋಭೆ ತರುವುದಿಲ್ಲ "ನಾವು ಪುನೀತ್ ಸರ್ ಅಭಿಮಾನಿಗಳು, ನಮ್ಮ ಮನೆ ದೇವರು. ಇಲ್ಲಿ ಪುನೀತ್ ರಾಜಕುಮಾರ್ ನಮ್ಮನಗಲಿ ಹೋಗಿದ್ದರು ಕೂಡ ಇವರು ಬದುಕಿದ ರೀತಿ, ಇವರ ಜೀವನ ಶೈಲಿ, ಸರಳ ಸಜ್ಜನಿಕೆಯ ಇವರ ವ್ಯಕ್ತಿತ್ವ ಯಾವತ್ತಿಗೂ ಅಮರವೇ... ಅಲ್ಲವೆ.

ನಮ್ಮ ಬದುಕು ಇತರರಿಗೆ ಆದರ್ಶವಾಗಿರಬೇಕು. ಇದು ಸುಲಭವಾಗಿ ಇಲ್ಲದೆ ಇರಬಹುದು ಆದರೆ ನಮಗೆ ಗೊತ್ತಿಲ್ಲದೆ ನಮ್ಮನ್ನು ಹಿಂಬಾಲಿಸುವ ಸಾಕಷ್ಟು ಅಭಿಮಾನಿಗಳು ಕೂಡ ನಮ್ಮ ಪ್ರತಿ ಹೆಜ್ಜೆಯನ್ನು ಕೂಡ ಹಿಂಬಾಲಿಸುತ್ತಾರೆ. ನಟ ದರ್ಶನ್ ಅವರ ಅಭಿಮಾನಿಗಳು ಅಪರಾಧಿ ಸ್ಥಾನದಲ್ಲಿ ಇರುವ ಅವರ ಅಪರಾಧಿ ಸಂಖ್ಯೆಯ 6106 ಟ್ಯಾಟೂ ಹಾಕಿಕೊಂಡಿದ್ದು, ಶಾಲೆಯ ಮಕ್ಕಳು ಕೂಡ ಸಂಖ್ಯೆಯನ್ನು ಹೇಳುತ್ತಿದ್ದರು ನೋಡಿ ಅವರ ಬಗ್ಗೆ ಇರುವ ಅಭಿಮಾನ ಯಾವ ಮಟ್ಟಿಗೆ ಇರಬಹುದು ರಿ! ನಮ್ಮನ್ನು ಜನ ಹಿಂಬಾಲಿಸುತ್ತೀದ್ದಾರೆ ಎಂದರೆ ನಾವು ಆದರ್ಶಮಾನ ಜೀವನ ನಡೆಸಬೇಕು.

ನಟ ಶಾರುಖ್ ಖಾನ್ ಪುತ್ರ ಆರ್ಯನ್ ಖಾನ್ ಡ್ರಗ್ಸ್ ಸೇವನೆ ಕೇಸ್ ನಲ್ಲಿ ಸಿಕ್ಕಿ ಬಿದ್ದು, ಜೈಲಿನಲಿದ್ದಾಗ ಅನೇಕ ಗೋಸಿಪ್‌ಗಳನಡುವೆ ಎಲ್ಲಿಯೂ ಶಾರುಕ್ ಖಾನ್ ವಯಕ್ತಿಕ ವಿಷಯದ ಬಗ್ಗೆ ಎಲ್ಲಿಯೂ ಅಪಪ್ರಚಾರ ಆಗಲಿಲ್ಲ ಯಾಕೆ ಗೊತ್ತಾ ಶಾರುಖ್ ಖಾನ್ ಅವರ ಉತ್ತಮ ವ್ಯಕ್ತಿತ್ವ ಅವರನ್ನು ರಕ್ಷಿಸಿತು. ಅದಕ್ಕೆ ಮನುಷ್ಯನ ಬದುಕು ವ್ಯಕಿಯ ವ್ಯಕ್ತಿತ್ವದ ಕನ್ನಡಿ.....

> ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
> ಡಿ.ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಆಷಾಡ । ಸಂವತ್ಸರ: ಕ್ರೋಧಿ

**17-07-2024 – ಬುಧವಾರ**

| | |
|---|---|
| ತಿಥಿ | : ಏಕಾದಶಿ |
| ಪಕ್ಷ | : ಶುಕ್ಲ |
| ನಕ್ಷತ್ರ | : ಅನುರಾಧ |
| ಯೋಗ | : ಶುಭ |
| ಕರಣ | : ವಾಣಿಜ |
| ಸೂರ್ಯೋದಯ | : 05:52:23 |
| ಸೂರ್ಯಾಸ್ತ | : 19:13:44 |
| ರಾಹು | : 12:33–14:13 |
| ಯಮಘಂಡ | : 07:33–09:13 |
| ಗುಳಿಕ | : 10:53–12:33 |

## ತುಂಗಭದ್ರಾ ನೀರಿನ ಮಟ್ಟ



**ಮಂಗಳವಾರ : 16–07–2024**

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1608.91 ಅಡಿ |
| ಒಳ ಹರಿವು | 28153 ಕ್ಯುಸೆಕ್ |
| ಹೊರ ಹರಿವು | 211 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 35.473 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1588.09 ಅಡಿ |
| ಒಳ ಹರಿವು | 5955 ಕ್ಯುಸೆಕ್ |
| ಹೊರ ಹರಿವು | 195 ಕ್ಯುಸೆಕ್ |
| ಸಾಮರ್ಥ್ಯ | 9.508 ಟಿಎಂಸಿ |

# ನರೇಗಾ ಯೋಜನೆಯಡಿ ಮಾನವ ದಿನಗಳ ಸೃಜನೆಯಲ್ಲಿ ರಾಯಚೂರು ಪ್ರಥಮ ಸ್ಥಾನ

## ಜಿಲ್ಲೆಗೆ 1 ಕೋಟಿ 10 ಲಕ್ಷ ಮಾನವ ದಿನಗಳ ಗುರಿ; 71,51,484 ಮಾನವ ದಿನಗಳ ಸೃಜಿಸಿ ರಾಜ್ಯದಲ್ಲೇ ಪ್ರಥಮ

**ಹಂಪಿ ಟೈಮ್ಸ್ ರಾಯಚೂರು**

ಗ್ರಾಮೀಣ ಪ್ರದೇಶದ ಜನರ ಗುಳೆ ಹೋಗುವುದನ್ನು ತಡೆಯಲು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ರಾಯಚೂರು ಜಿಲ್ಲಾ ಪಂಚಾಯತ್ ವತಿಯಿಂದ ಕೂಲಿ ಕಾರ್ಮಿಕರಿಗೆ ಕೆಲಸ ನೀಡಿ ಮಾನವ ದಿನಗಳನ್ನು ಸೃಜನೆ ಮಾಡುವಲ್ಲಿ ರಾಯಚೂರು ಜಿಲ್ಲೆ ರಾಜ್ಯದಲ್ಲಿಯೇ ಪ್ರಥಮ ಸ್ಥಾನದಲ್ಲಿ ಗುರುತಿಸಿಕೊಂಡಿದೆ.

ರಾಯಚೂರು ಜಿಲ್ಲೆಗೆ 1 ಕೋಟಿ 10ಲಕ್ಷ ಮಾನವ ದಿನಗಳ ಗುರಿ ನೀಡಲಾಗಿದೆ. ಪ್ರಸ್ತುತ ಏಪ್ರಿಲ್ ನಿಂದ ಜುಲೈವರೆಗೆ 71,51,484 ಮಾನವ ದಿನಗಳ ಸೃಜಿಸಿ ರಾಜ್ಯದಲ್ಲೇ ಪ್ರಥಮ ಸ್ಥಾನದಲ್ಲಿದೆ. ಇನ್ನೂ ಬೆಳಗಾವಿ 54,09,643 ದ್ವಿತೀಯ ಸ್ಥಾನ, ಬಳ್ಳಾರಿ 51,92,570 ತೃತೀಯ ಸ್ಥಾನ, ಕೊಪ್ಪಳ 49,82,398 ನಾಲ್ಕನೇ ಸ್ಥಾನ, ವಿಜಯನಗರ 42,61,076 ಐದನೇ ಸ್ಥಾನದಲ್ಲಿದೆ.

2024ರ ಏಪ್ರಿಲ್ 1ರಿಂದ ಕೇಂದ್ರ ಸರ್ಕಾರ ನರೇಗಾ ಕೂಲಿ ಮೊತ್ತವನ್ನು 316ರೂ. ಯಿಂದ 349ರೂ.ಗೆ ಹೆಚ್ಚಳ ಮಾಡಿದೆ. ಈ ಬಗ್ಗೆ ರಾಯಚೂರು ಜಿಲ್ಲಾ ಪಂಚಾಯತ್ ವತಿಯಿಂದ ಜಿಲ್ಲೆಯ ಕೂಲಿಕಾರರಿಗೆ ಹೆಚ್ಚು ಮಾಹಿತಿ ನೀಡಿದ್ದರಿಂದ ಜನ ಗುಳೆ ಹೋಗುವುದನ್ನು ಬಿಟ್ಟು ನರೇಗಾದಡಿ ಇದ್ದೂರಲ್ಲೇ ಕೆಲಸ ಮಾಡಿಕೊಂಡು ನೆಮ್ಮದಿಯ ಬದುಕು ಕಟ್ಟಿಕೊಳ್ಳುತ್ತಿದ್ದಾರೆ.

ಜಿಲ್ಲೆಯ 179 ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಕೂಲಿಕಾರರು ಕೆರೆ ಅಭಿವೃದ್ಧಿ, ಕೃಷಿ ಹೊಂಡ, ಬದು ನಿರ್ಮಾಣ ಮತ್ತು ನಾಲಾ ಹೂಳೆತ್ತುವ ಕೆಲಸ ಮಾಡುತ್ತಿದ್ದಾರೆ. ಮಹಿಳೆಯರ ಭಾಗವಹಿಸುವಿಕೆ ಪ್ರಮಾಣ ಶೇ.62.21 ರಾಯಚೂರು ಜಿಲ್ಲೆಯಾದ್ಯಂತ ಎಲ್ಲ ಗ್ರಾಮ ಪಂಚಾಯಿತಿಗಳಲ್ಲಿ ನರೇಗಾ ಯೋಜನೆಯಡಿ ಮಹಿಳೆಯರಿಗೆ ಹೆಚ್ಚಿನ ಪ್ರಮಾಣದಲ್ಲಿ ಕೂಲಿ ಒದಗಿಸಲಾಗಿದೆ.

**ರೈತರಿಗಾಗಿ ವಿವಿಧ ಯೋಜನೆ:** ರಾಯಚೂರು ಜಿಲ್ಲಾ ಪಂಚಾಯತಿಯಿಂದ ಜಿಲ್ಲೆಯಾದ್ಯಂತ 179 ಗ್ರಾ.ಪಂಗಳಲ್ಲಿ ಜಲಸಂರಕ್ಷಣೆ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಪ್ರಗತಿಯಲ್ಲಿವೆ. ಪ್ರಸ್ತಕ ನರೇಗಾದಡಿ ರೈತರ ಜಮೀನುಗಳಲ್ಲಿ ಕೈಗೆತ್ತಿಕೊಂಡಿರುವ ಅಂತರ್ಜಲವೃದ್ಧಿಗೆ ಈ ವರ್ಷ ಕ್ರಿಯಾ ಯೊಜನೆ ಪ್ರಕಾರ ಜಿಲ್ಲೆಯಲ್ಲಿ ಪ್ರತಿ ಗ್ರಾಮ ಪಂಚಾಯತಿಯಲ್ಲಿ ಕನಿಷ್ಠ 50 ರೈತರ ಜಮೀನಿನಲ್ಲಿ



ಬದು, ಕೃಷಿ ಹೊಂಡ, ತೆರೆದ ಬಾವಿ ನಿರ್ಮಾಣ ಕಾಮಗಾರಿ, 50 ಸೋಕ್‌ಪಿಟ್ ನಿರ್ಮಾಣ, ಕಾಮಗಾರಿ ನಿರ್ವಹಿಸುವುದು, ಕೆರೆಗಳನ್ನು ಸಮಗ್ರವಾಗಿ ಅಭಿವೃದ್ಧಿಪಡಿಸಲು ಕೆರೆಗೆ ನೀರು ಹರಿದು ಬರುವ ಕಾಲುವೆಗಳ ಪುನಶ್ಚೇತನ, ಕೆರೆ ಹೂಳು ತೆಗೆಯುವುದು, ಕೆರೆ ಏರಿ ಮತ್ತು ಕೋಡಿ ದುರಸ್ತಿ, ರೈತರ ಜಮೀನುಗಳಿಗೆ ನೀರು ಹರಿದು ಹೋಗುವ ಕಾಲುವೆಗಳ ಪುನಶ್ಚೇತನ ಮತ್ತು ಕೆರೆ ಅಂಚಿನಲ್ಲಿ ಅರಣ್ಯೀಕರಣ ಕಾಮಗಾರಿಗಳನ್ನು ಅನುಷ್ಠಾನಗೊಳಿಸುವುದು, ರಸ್ತೆ ಬದಿ ನೆಡುತೋಪು, ಬ್ಲಾಕ್ ಪ್ಲಾಂಟೇಶನ್, ಕೃಷಿ ಅರಣ್ಯೀಕರಣ, ರೈತರ ಜಮೀನುಗಳಲ್ಲಿ ತೋಟಗಾರಿಕೆ ಬೆಳೆ ಬೆಳೆಯಲು ಮುಂಗಡ ಗುಂಡಿ ತೆಗೆಯುವ ಕಾಮಗಾರಿಗಳು, ಬೋರ್‌ವೆಲ್ ರಿಜಾರ್ಜ್ ಕಾಮಗಾರಿ ಕೈಗೆತ್ತಿಕೊಳ್ಳಲಾಗುತ್ತಿದೆ.

**40,936 ಕಾಮಗಾರಿಗಳ ಅನುಷ್ಠಾನಕ್ಕೆ ಜಿ.ಪಂ ನಿಂದ ತಯಾರಿ;** ರಾಯಚೂರು ಜಿಲ್ಲಾ ಪಂಚಾಯತಿ ವತಿಯಿಂದ ಜಿಲ್ಲೆಯಾದ್ಯಂತ 179 ಗ್ರಾ.ಪಂಗಳಲ್ಲಿ ಜಲಸಂರಕ್ಷಣೆ ಕಾಮಗಾರಿಗಳನ್ನು ಕೈಗೆತ್ತಿಕೊಂಡಿದ್ದು, ಗೇಬಿಯನ ಚೆಕ್ ಡ್ಯಾಂ–141, ಬೋಲ್ಡರ್ ಚೆಕ್– 180, ಚೆಕ್ ಡ್ಯಾಂ–187, ಮಲ್ಟಿ ಆರ್ಚ್ ಚೆಕ್ ಡ್ಯಾಂ–6, ಗಲ್ಲಿ ಪ್ಲಗ್–46, ಲೂಸ ಸ್ಟೋನ ಚೆಕ್ ಡ್ಯಾಂ–2, ಲೂಸ ಬೋಲ್ಡರ್ ಚೆಕ್ ಡ್ಯಾಂ–30, ಕೆರೆ ನಿರ್ಮಾಣ ಅಥವಾ ಹೂಳೆತ್ತುವುದು–789, ಗೋಕಟ್ಟೆ ನಿರ್ಮಾಣ ಅಥವಾ ಪುನಶ್ಚೇತನ–97, ಕಲ್ಯಾಣಿ ನಿರ್ಮಾಣ ಅಥವಾ ಪುನಶ್ಚೇತನ–26, ಕಾಲುವೆ ನಿರ್ಮಾಣ ಅಥವಾ ಹೂಳೆತ್ತುವುದು–826, ನಾಲಾ ಹೂಳೆತ್ತುವುದು–2489, ಹಳ್ಳ ಹೂಳೆತ್ತುವುದು–428, ಕೃಷಿಹೊಂಡ–2067, ಬದು ನಿರ್ಮಾಣ–9069, ತೆರೆದ ಬಾವಿ ನಿರ್ಮಾಣ–108, ಬೋರ್ ವೆಲ್ ರೀಚಾರ್ಜ್ ಪಿಟ್–296, ಸರ್ಕಾರಿ/ಗ್ರಾಮ ಪಂಚಾಯತ್ ಕಟ್ಟಡಗಳಲ್ಲಿ ಮಳೆ ನೀರು ಕೋಯ್ಲು ರಚನೆ–3, ರಸ್ತೆ ಬದಿ ನೆಡುತೋಪು–348, ಕೃಷಿ ಅರಣ್ಯೀಕರಣ–52, ಸಾರ್ವಜನಿಕ ಸ್ಥಳಗಳಲ್ಲಿ ಗಿಡ ನೆಡುವುದು–126, ವೃಕ್ಷ ವನ/ಪವಿತ್ರ ವನ–3, ಅರಣ್ಯ ಪ್ರದೇಶಗಳಲ್ಲಿ ಕಂದಕಗಳ ನಿರ್ಮಾಣ–48, ದನಗಳ ಶೆಡ್ ಕಾಮಗಾರಿಗಳು –473, ಕುರಿ/ಮೇಕೆ ಶೆಡ್ ನಿರ್ಮಾಣ–346, ಕೋಳಿ ಸಾಕಣೆ ಶೆಡ್ ನಿರ್ಮಾಣ–27, ಹಂದಿ ಸಾಕಣೆ ಶೆಡ್ ನಿರ್ಮಾಣ–10, ಏರೆಹುಳು ತೊಟ್ಟಿ ನಿರ್ಮಾಣ–86, ರೇಷ್ಮೆ ಕಾಮಗಾರಿಗಳು–15, ರೇಷ್ಮೆ ಕಾಮಗಾರಿಗಳ ಪ್ರದೇಶ ವಿಸ್ತರ್ಣ–26, ವಸತಿ ನಿರ್ಮಾಣ–2203, ಶಾಲಾ ಕಂಪೌಂಡ್– 232, ಶಾಲಾ ಶೌಚಾಲಯ– 208, ಶಾಲಾ ಆಟದ ಮೈದಾನ– 137, ಖೋಖೋ ಆಟದ ಮೈದಾನ–15, ಬಾಸ್ಕೆಟ ಬಾಲ ಆಟದ ಮೈದಾನ–5, ಕಬಡ್ಡಿ ಆಟದ ಮೈದಾನ–7, ವಾಲಿಬಾಲ ಆಟದ ಮೈದಾನ–11, ಮಳೆ ನೀರು ಕೊಯ್ಲು–33, ಪೌಷ್ಠಿಕ ತೋಟ–83, ಶಾಲಾ ಅಡುಗೆ ಕೋಣೆ ನಿರ್ಮಾಣ– 52, ಭೋಜನಾಲಯ ನಿರ್ಮಾಣ–1, ಸೋಕ್ ಪಿಟ್ ನಿರ್ಮಾಣ–8543, ಸಮುದಾಯ ಸೋಕ್ ಪಿಟ್ ನಿರ್ಮಾಣ– 38, ಘನ ಮತ್ತು ದ್ರವ ತ್ಯಾಜ್ಯ ನಿರ್ವಹಣೆ ಕಾಮಗಾರಿಗಳು–11, ಬೂದು ನೀರಿನ ನಿರ್ವಹಣೆ ಕಾಮಗಾರಿಗಳು–205, ಗೋದಾಮು ನಿರ್ಮಾಣ–19, ಸಂಜೀವಿನಿ ಶೆಡ್ ನಿರ್ಮಾಣ–20, ಅಂಗನವಾಡಿ ಕಟ್ಟಡಗಳು–27, ಹಳ್ಳಿ ಸಂತೆ–6, ಸಿ.ಸಿ.ರಸ್ತೆ ಕಾಮಗಾರಿಗಳು–907, ತೋಟಗಾರಿಕೆ ಬೆಳೆಗಳು– 1739, ತೋಟಗಾರಿಕೆ ಬೆಳೆಗಳ ಪ್ರದೇಶ ವಿಸ್ತೀರ್ಣ–631, ಮೊರಮ ರಸ್ತೆ ಕಾಮಗಾರಿಗಳು–291, ಮೆಟಲ ರಸ್ತೆ ಕಾಮಗಾರಿಗಳು– 454, ಚರಂಡಿ ಕಾಮಗಾರಿಗಳು–560, ಸಿ.ಡಿ ನಿರ್ಮಾಣ–743, ಸ್ಮಶಾನ–173, ಒಕ್ಕಣಿ ಕಣ–3, ದನಗಳ ಕುಡಿಯುವ ನೀರಿನ ತೊಟ್ಟಿ ನಿರ್ಮಾಣ–4, ಬಯೋ ಗ್ಯಾಸ್–9, ಗೋಮಾಳ ಅಭಿವೃದ್ಧಿ–29, ಚೆಕ್ ಡ್ಯಾಂ ಹೂಳೆತ್ತುವುದು–16, ಉದ್ಯಾನವನ–262, ಗ್ರಾಮ ಪಂಚಾಯಿತಿ ಕಟ್ಟಡ–13, ಈರುಳ್ಳಿ ಶೆಡ್ಡು–42, ಸಿಲ್ವಿಪ್ಯಾಚರ್–72, ರೈತರ ಜಮೀನಿನಲ್ಲಿ ನೆಡುತೋಪು–42, ನ್ಯೂಟ್ರಿಷನ್ ಗಾರ್ಡನ್–11 ಇತರೆ ಕಾಮಗಾರಿಗಳು ಸೇರಿದಂತೆ ಒಟ್ಟು 40936 ಕಾಮಗಾರಿಗಳನ್ನು ಹಂತ ಹಂತವಾಗಿ ಅನುಷ್ಠಾನಗೊಳಿಸಲು ಜಿಲ್ಲಾ ಪಂಚಾಯತ್ ನಿಂದ ತಯಾರಿ ನಡೆಸಲಾಗಿದೆ.

**ಕೂಲಿ ಸಾಮಾಗ್ರಿ ಪಾವತಿ:** ಒಟ್ಟು 3,50,791 ಸಕ್ರಿಯ ಉದ್ಯೋಗ ಚೀಟಿಗಳನ್ನು ನೀಡಲಾಗಿದೆ. 172.82 ಲಕ್ಷಗಳು ಕೂಲಿ ವೆಚ್ಚವನ್ನು ಪಾವತಿ ಮಾಡಲಾಗಿದೆ. 19.73 ಲಕ್ಷಗಳು ಸಾಮಾಗ್ರಿ ವೆಚ್ಚವನ್ನು ಪಾವತಿ ಮಾಡಲಾಗಿದೆ. ಜಿಲ್ಲೆಯಲ್ಲಿ ಒಟ್ಟು 5,50,576 ಸಕ್ರಿಯ ಕೂಲಿ ಕಾರ್ಮಿಕರನ್ನು ಒಳಗೊಂಡಿದ್ದು, ಅದರಲ್ಲಿ 2,82,322 ಸಕ್ರಿಯ ಮಹಿಳೆಯರು ಹಾಗೂ 966 ಅಂಗವಿಕಲರು ಮತ್ತು 169 ಕುಟುಂಬಗಳು 100 ದಿನ ಪೂರೈಸಿದ ಕುಟುಂಬಗಳ ಕಂಡುಬರುತ್ತೇವೆ. 21,384 ಹೊಸ ವಲಸೆ ಬಂದಿರುವ ಕುಟುಂಬಗಳಿಗೆ ಉದ್ಯೋಗ ಚೀಟಿಗಳನ್ನು ನೀಡಿ, ಉದ್ಯೋಗ ನೀಡಲಾಗಿದೆ.

## ಜು.21 ಹಡಪದ ಅಪ್ಪಣ್ಣ ಜಯಂತಿ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾಡಳಿತದಿಂದ ಶಿವಶರಣ ಶ್ರೀ ಹಡಪದ ಅಪ್ಪಣ್ಣ ಜಯಂತಿ ಕಾರ್ಯಕ್ರಮವನ್ನು ಜು.21 ರಂದು ಅರ್ಥಪೂರ್ಣ ಆಚರಿಸಲಾಗುವುದು ಎಂದು ಅಪರ ಜಿಲ್ಲಾಧಿಕಾರಿ ಮೊಹಮ್ಮದ್ ಝುಬೇರ್ ಹೇಳಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿಯ ಸಭಾಂಗಣದಲ್ಲಿ ಮಂಗಳವಾರ ಏರ್ಪಡಿಸಿದ್ದ ಹಡಪದ ಅಪ್ಪಣ್ಣ ಜಯಂತಿ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದರು. ಅಂದು ಬೆಳಿಗ್ಗೆ 10.30 ಕ್ಕೆ ನಗರದ ಹೆಚ್.ಆರ್.ಗವಿಯಪ್ಪ ವೃತ್ತದಿಂದ ಡಾ.ಜೋಳದರಾಶಿ ದೊಡ್ಡನಗೌಡ ರಂಗಮಂದಿರದ ವೇದಿಕೆ ಕಾರ್ಯಕ್ರಮದವರೆಗೆ ಮೆರವಣಿಗೆ ನಡೆಯಲಿದೆ. ಅಗತ್ಯ ಸಿದ್ಧತೆ ಮಾಡಿಕೊಳ್ಳಬೇಕು ಎಂದು ತಿಳಿಸಿದರು.

ವೇದಿಕೆ ಕಾರ್ಯಕ್ರಮ ನಡೆಯುವ ಸ್ಥಳ ಸ್ವಚ್ಛತೆ, ಕುಡಿಯುವ ನೀರಿನ ವ್ಯವಸ್ಥೆ, ಮೆರವಣಿಗೆಗೆವಾಹನವ್ಯವಸ್ಥೆಕಲ್ಪಿಸಿಕೊಡಬೇಕು ಎಂದು ಮಹಾನಗರ ಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದರು.

ಶಿಷ್ಠಾಚಾರದಂತೆ ಆಹ್ವಾನ ಪತ್ರಿಕೆ ಮುದ್ರಿಸಿ ಗಣ್ಯರನ್ನು ಆಹ್ವಾನಿಸಬೇಕು. ಶಿವಶರಣರ ಕುರಿತು ವಿಷಯ ತಜ್ಞರಿಂದ ವಿಶೇಷ ಉಪನ್ಯಾಸ ಮತ್ತು ಕಲಾವಿದರಿಂದ ವಚನ ಗಾಯನವನ್ನು ಆಯೋಜಿಸಬೇಕು ಎಂದು ತಿಳಿಸಿದರು.


## ಹೆಸರು ತಿದ್ದುಪಡೆ

ನಾನು ಬಾಸ್ಕರ್ ಪ್ರಸಾದ್ ತೋಗರಚೇಟಿ (BHASKAR PRASAD TOGARCHETI) ತಂದೆ ಟಿ. ರಘುನಂದನ್, ವಯಸ್ಸು 22 ವರ್ಷ, ವಾಸ: ಡೋರ್ ನಂ.44, ಐಎಸ್‌ಆರ್ ರೋಡ್, ಪಂಪಾಶಾಸ್ತ್ರಿ ಬಂಗಲೆ, ಹೊಸಪೇಟೆ, ಹೊಸಪೇಟೆ ತಾಲೂಕು, ವಿಜಯನಗರ ಜಿಲ್ಲೆ.

ನನ್ನ ಡ್ರೈವಿಂಗ್ ಲೈಸನ್ಸ್‌ನಲ್ಲಿ ನನ್ನ ಹೆಸರನ್ನು TOGARCHETI BHASKA PRASAD ಎಂದು ತಪ್ಪಾಗಿ ನಮೂದಾಗಿದ್ದು, ನನ್ನ ಹೆಸರನ್ನು BHASKAR PRASAD TOGARCHETI ಎಂದು ನಮೂದಿಸಿ ಹೊಸ ಡ್ರೈವಿಂಗ್ ಲೈಸನ್ಸ್‌ನ್ನು ನೀಡಬೇಕೆಂದು ದಿನಾಂಕ 16–07–2024 ರಂದು ನೋಟರಿ ಕೆ.ಸುರಭಿ ದುರ್ಗ ಹೊಸಪೇಟೆ ಇವರ ಸಮಕ್ಷಮದಲ್ಲಿ ಪ್ರಮಾಣೀಕರಿಸುತ್ತಿದ್ದೇನೆ.


# ಬೀಜ, ರಸಗೊಬ್ಬರ, ಕೀಟನಾಶಕ ಖರೀದಿಸುವಾಗ ಇರಲಿ ಎಚ್ಚರ

## ಬಳ್ಳಾರಿ ಜಿಲ್ಲಾ ಜಂಟಿ ಕೃಷಿ ನಿರ್ದೇಶಕ ಡಾ.ಕೆ.ಸೋಮಸುಂದರ್ ಸೂಚನೆ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲೆಯ ರೈತರು ಕೃಷಿ ಪರಿಕರಗಳಾದ ಬೀಜ ರಸಗೊಬ್ಬರ ಮತ್ತು ಕೀಟನಾಶಕಗಳ ಖರೀದಿಸು ವಾಗ ಎಚ್ಚರವಹಿಸಬೇಕು ಎಂದು ಜಂಟಿ ಕೃಷಿ ನಿರ್ದೇಶಕ ಡಾ.ಕೆ.ಸೋಮಸುಂದರ್ ಅವರು ತಿಳಿಸಿದ್ದಾರೆ.

ಬಿತ್ತನೆ ಬೀಜ, ರಸಗೊಬ್ಬರ ಮತ್ತು ಕೀಟನಾಶಕಗಳನ್ನು ಅಧಿಕೃತವಾಗಿ ಪರವಾನಿಗೆ ಪಡೆದ ಮಾರಾಟ ಕೇಂದ್ರಗಳಿಂದಲೇ ಖರೀದಿಸಬೇಕು. ಖರೀದಿಸಿದ ನಂತರ ಮಾರಾಟಗಾರರಿಂದ ಕಡ್ಡಾಯವಾಗಿ ರಸೀದಿ ಕೇಳಿ ಪಡೆಯಬೇಕು ಎಂದು ಹೇಳಿದ್ದಾರೆ.

ಬಿತ್ತನೆ ಬೀಜ ಖರೀದಿ ರಸೀದಿಯಲ್ಲಿ ತಳಿಹೆಸರು, ಲಾಟ್ ಸಂಖ್ಯೆ, ಮಾರಾಟಗಾರರ ಮತ್ತು ಉತ್ಪಾದಕರ ವಿಳಾಸ ಗಮನಿಸಬೇಕು. ಬಿತ್ತನೆ ಬೀಜದ ಚೀಲದಲ್ಲಿ ಸ್ವಲ್ಪ ಪ್ರಮಾಣದ ಬೀಜ ಮತ್ತು ಬಿತ್ತನೆ ಬೀಜದ ದೃಢೀಕರಣದ ಬಗ್ಗೆ ಲಗತ್ತಿಸಿದ ಟ್ಯಾಗ್‌ನ್ನು ಬೆಳೆ ಕಟಾವು ಆಗುವವರೆಗೆ ಸುರಕ್ಷಿತವಾಗಿ ಕಾಯ್ದಿರಿಸಿಕೊಳ್ಳಬೇಕು ಎಂದಿದ್ದಾರೆ.

ರಸಗೊಬ್ಬರದ ಚೀಲವನ್ನು ಖರೀದಿಸುವಾಗ ಚೀಲವು ಯಂತ್ರದಿಂದ ಹೊಲಿದಿರಬೇಕು ಮತ್ತು ನಮೂದಿಸಿದಂತೆ ತೂಕ ಸರಿಯಾಗಿದೆಯೇ? ಎಂಬುದರ ಬಗ್ಗೆ ಖಾತ್ರಿ ಪಡಿಸಿಕೊಳ್ಳಬೇಕು. ಸಂಶಯವಾದಲ್ಲಿ ತೂಕ ಮಾಡಿಸಿ ಖರೀದಿಸಬೇಕು. ರಸಗೊಬ್ಬರದ ಚೀಲದ ಮೇಲೆ ನಮೂದಿಸಿರುವ ಗರಿಷ್ಟ ಮಾರಾಟ ಬೆಲೆಗಿಂತ ಹೆಚ್ಚಿಗೆ ಹಣವನ್ನು ನೀಡಬಾರದು. ರಸಗೊಬ್ಬರ ಖರೀದಿ ರಸೀದಿಯಲ್ಲಿ ರಸಗೊಬ್ಬರದ ಹೆಸರು, ಬ್ರಾಂಡ್ ಹೆಸರು ಮತ್ತು ಬ್ಯಾಚ್ ಸಂಖ್ಯೆ ನಮೂದಿಸಿರಬೇಕು. ರಸಗೊಬ್ಬರವನ್ನು ಖರೀದಿಸಬೇಕಾದರೆ ರೈತರು ತಪ್ಪದೇ ಆಧಾರ್ ಸಂಖ್ಯೆಯನ್ನು ನೀಡಿ ಪಿ.ಓ.ಎಸ್ ಮಷಿನ್ ಬಿಲ್ ತಪ್ಪದೇ ಪಡೆಯಬೇಕು ಎಂದು ಅವರು ತಿಳಿಸಿದ್ದಾರೆ.

ಕೀಟನಾಶಕಗಳನ್ನು ಖರೀದಿಸುವಾಗ ಬಾಟಲಿ, ಟಿನ್, ಪಾಲಿಥೀನ್ ಪೌಚ್ ಮೇಲೆ ತಯಾರಕರ ಹೆಸರು, ತಯಾರಿಸಿದ ದಿನಾಂಕ, ಕೊನೆಗೊಳ್ಳುವ ದಿನಾಂಕ, ಬ್ಯಾಚ್ ಸಂಖ್ಯೆ ಹಾಗು ಎರಡು ತ್ರಿಕೋನಗಳ ಚಿನ್ಹೆಯನ್ನು ತಪ್ಪದೇ ಗಮನಿಸಬೇಕು. ಪ್ರತಿಯೊಂದು ಕೀಟನಾಶಕದ ಧಾರಕಗಳ ಮೇಲೆ ಅವುಗಳಲ್ಲಿರುವ ವಿಷದ ಪ್ರಮಾಣಕ್ಕೆ ಅನುಗುಣವಾಗಿ ನಾಲ್ಕು ತರಹದ ಕೀಟನಾಶಕಗಳೆಂದು ಪರಿಗಣಿಸಲಾಗಿದೆ. ಅವುಗಳನ್ನು ಗುರುತಿಸಲು ಎರಡು ತ್ರಿಕೋನಗಳಲ್ಲಿ ಪದ ಹಾಗು ಚಿಹ್ನೆಗಳ ಮೂಲಕ ತಿಳಿಯಪಡಿಸಲಾಗುತ್ತದೆ.

ಮೊದಲನೆಯದಾಗಿ, ಮೇಲಿನ ತ್ರಿಕೋನದಲ್ಲಿ ವಿಷ ಎಂಬ ಪದದ ಜೊತೆಗೆ ಎಲಬು ಮತ್ತು ಬುರುಡೆ ಚಿಹ್ನೆ ಮತ್ತು ಕೆಳಗಿನ ತ್ರಿಕೋನದಲ್ಲಿ ಕೆಂಪು ಬಣ್ಣ, ಎರಡನೆಯದಾಗಿ ಮೇಲಿನ ತ್ರಿಕೋನದಲ್ಲಿ ವಿಷ ಎಂಬ ಪದ ಮತ್ತು ಕೆಳಗಿನ ತ್ರಿಕೋನದಲ್ಲಿ ಹಳದಿ ಬಣ್ಣ, ಮೂರನೇಯದಾಗಿ ಮೇಲಿನ ತ್ರಿಕೋನದಲ್ಲಿ ಅಪಾಯ ಎಂಬ ಪದ ಮತ್ತು ಕೆಳಗಿನ ತ್ರಿಕೋನದಲ್ಲಿ ನೀಳಿ ಬಣ್ಣ ಮತ್ತು ನಾಲ್ಕನೇಯದಾಗಿ ಮೇಲಿನ ತ್ರಿಕೋನದಲ್ಲಿ ಎಚ್ಚರಿಕೆ ಎಂಬ ಪದ ಮತ್ತು ಕೆಳಗಿನ ತ್ರಿಕೋನದಲ್ಲಿ ಹಸಿರು ಬಣ್ಣದ ಗುರುತು ಕಡ್ಡಾಯವಾಗಿ ಇರಬೇಕು.

ಹಾಗಾಗಿ ರೈತರು ಅಧಿಕೃತ ಕೀಟನಾಶಕಗಳನ್ನೇ ಮಾತ್ರ ಖರೀದಿಸಬೇಕು ಮತ್ತು ವಿವಿಧ ಬೆಳೆಗಳಿಗೆ ಕೀಟಗಳ ಹತೋಟಿಗಾಗಿ ಶಿಫಾರಸ್ಸು ಮಾಡಿದ ಕೀಟನಾಶಕಗಳನ್ನು ನಿಗಧಿತ ಪ್ರಮಾಣದಲ್ಲಿ ಮಾತ್ರ ಬಳಸಬೇಕು ಎಂದಿದ್ದಾರೆ.

ರೈತರು ಎಲ್ಲಿಯಾದರೂ ನಕಲಿ ಬೀಜ, ರಸಗೊಬ್ಬರ, ಕೀಟನಾಶಕ ತಯಾರಿಕೆ ಮತ್ತು ಮಾರಾಟ ಮಾಡುವುದು ಕಂಡುಬಂದಲ್ಲಿ ಆಯಾ ರೈತ ಸಂಪರ್ಕ ಕೇಂದ್ರದ ಅಥವಾ ತಾಲ್ಲೂಕಿನ ಪರಿವೀಕ್ಷಕರಿಗೆ ದೂರವಾಣಿ ಮೂಲಕ ಇಲ್ಲವೇ ಲಿಖಿತ ದೂರು ನೀಡಿದಲ್ಲಿ ಕ್ರಮ ತೆಗೆದುಕೊಳ್ಳಲಾಗುತ್ತದೆ. ದೂರುದಾರನ ಹೆಸರು ಗೌಪ್ಯವಾಗಿ ಇಡಲಾಗುವುದು. ನಕಲಿ ಪರಿಕರಗಳ ಮಾರಾಟ ತಡೆಹಿಡಿಯಲು ರೈತರು ಕೃಷಿ ಇಲಾಖೆಗೆ ಸಹಕರಿಸಬೇಕು ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದ್ದಾರೆ.

### ಬಿತ್ತನೆ ಬೀಜ, ರಸಗೊಬ್ಬರ ಕೀಟನಾಶಕ,ಕೊರತೆಯಿಲ್ಲ

ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲೆಯಲ್ಲಿ ಯಾವುದೇ ಬಿತ್ತನೆ ಬೀಜ, ರಸಗೊಬ್ಬರ ಹಾಗೂ ಕೀಟನಾಶಕಗಳ ಕೊರತೆ ಇರುವುದಿಲ್ಲ ಹಾಗೂ ರೈತರು ಕೃಷಿ ಪರಿಕರಗಳನ್ನು ಅಧಿಕೃತ ಮಾರಾಟಗಾರರಿಂದ ಮಾತ್ರ ಖರೀದಿ ಮಾಡಿ, ಕಡ್ಡಾಯವಾಗಿ ರಶೀದಿ ಪಡೆಯಬೇಕು ಎಂದು ಜಂಟಿ ಕೃಷಿ ನಿರ್ದೇಶಕ ಡಾ.ಕೆ.ಸೋಮಸುಂದರ್ ತಿಳಿಸಿದ್ದಾರೆ.

ಜಿಲ್ಲೆಯಲ್ಲಿ ರೈತರಿಗೆ ಉತ್ತಮ ಗುಣ ಮಟ್ಟದ ಬಿತ್ತನೆ ಬೀಜ,ರಸಗೊಬ್ಬರ ಹಾಗೂ ಕೀಟನಾಶಕಗಳನ್ನು ಪೂರೈಸುವುದು ಕೃಷಿ ಇಲಾಖೆ ಯ ಜವಾಬ್ದಾರಿ ಯಾಗಿದೆ. ಈ ನಿಟ್ಟನಲ್ಲಿ ಸುಮಾರು 32,789 ಕ್ವಿಂಟಾಲ್ ಬಿತ್ತನೆ ಬೀಜಗಳಾದ ಮೆಕ್ಕೆ ಜೋಳ, ತೊಗರಿ, ಜೋಳ, ಸಜ್ಜೆ ಹಾಗೂ ಭತ್ತ ದಾಸ್ತಾನಿದ್ದು, ರಸಗೊಬ್ಬರಗಳಾದ ಯೂರಿಯಾ, ಡಿ.ಎ.ಪಿ, ಕಾಂಪ್ಲೆಕ್ಸ್ ಸೇರಿ ಸುಮಾರು 70078 ಸಾವಿರ ಮೆಟ್ರಿಕ್ ಟನ್ ರಸಗೊಬ್ಬರವೂ ರೈತರಿಗೆ ಸಮರ್ಪಕವಾಗಿ ಲಭ್ಯವಾಗುವಂತೆ ದಾಸ್ತಾನಿಕರಿ ಸಲಾಗಿದೆ. ಜಿಲ್ಲೆಯಲ್ಲಿ ಬಿತ್ತನೆ ಬೀಜ ಮತ್ತು ರಸಗೊಬ್ಬರ ಕೊರತೆ ಇರುವುದಿಲ್ಲವೆಂದು ತಿಳಿಸಿದ್ದಾರೆ.

### ಬಿತ್ತನೆ ಬೀಜಗಳನ್ನು ಅಧಿಕೃತ ಮಾರಾಟಗಾರರಿಂದ ಖರೀದಿಸಿ

ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲೆಯ ರೈತರು ಬಿತ್ತನೆ ಬೀಜಗಳನ್ನು ಅಧಿಕೃತ ಮಾರಾಟಗಾರರಿಂದ ಮಾತ್ರ ಖರೀದಿಸಬೇಕು ಮತ್ತು ಅಧಿಕೃತ ಬಿಲ್ಲು ಪಡೆದುಕೊಳ್ಳಬೇಕು. ಯಾವುದೇ ಕಾರಣಕ್ಕೂ ಯಾರಾದರೂ ನೇರವಾಗಿ ಬಂದು ಲೂಸ್ ಪ್ಯಾಕೇಟ್‌ಗಳಲ್ಲಿ ಬಿತ್ತನೆ ಬೀಜಗಳನ್ನು ಮಾರಾಟ ಮಾಡಿದ್ದಲ್ಲಿ ಅಂತಹ ಬಿತ್ತನೆ ಬೀಜಗಳನ್ನು ಖರೀದಿಸಬಾರದು. ಪ್ರಸ್ತಕ ಸಾಲಿನಲ್ಲಿ ಉತ್ತಮ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿರುವುದರಿಂದ ಜಿಲ್ಲೆಯಲ್ಲಿ ಸರಿಯಾದ ಸಮಯಕ್ಕೆ ಬಿತ್ತನೆ ಕಾರ್ಯ ಪ್ರಾರಂಭವಾಗುವ ಅವಕಾಶವಿದೆ. ಹತ್ತಿ ಬೆಳೆಯುವ ರೈತರು ಹತ್ತಿ ಬಿತ್ತನೆ ಬೀಜಗಳನ್ನು ಅಧಿಕೃತ ಮಾರಾಟಗಾರರಿಂದ ಮಾತ್ರ ಅಧಿಕೃತ ಬಿಲ್ಲು ಪಡೆದು ಖರೀದಿಸಬೇಕು, ಯಾವುದೇ ಕಾರಣಕ್ಕೂ ಲೂಸ್ ಪ್ಯಾಕೇಟ್‌ಗಳಲ್ಲಿ ಬಿತ್ತನೆ ಬೀಜಗಳನ್ನು ಖರೀದಿಸಬಾರದು. ಅಂತಹ ಬೀಜ ಮಾರಾಟಗಾರರ ಕಂಡುಬಂದಲ್ಲಿ ಕೃಷಿ ಇಲಾಖೆಗೆ ಮಾಹಿತಿ ನೀಡಬೇಕು ಎಂದು ಎಂದು ಜಂಟಿ ಕೃಷಿ ನಿರ್ದೇಶಕ ಡಾ.ಕೆ.ಸೋಮಸುಂದರ್ ಅವರು ತಿಳಿಸಿದ್ದಾರೆ.

## ಪ್ರಧಾನ ಮಂತ್ರಿ ಕ್ಷಯ ಮುಕ್ತ ಭಾರತ ಅಡಿಯಲ್ಲಿ ನಾಲ್ವರನ್ನು ದತ್ತು ಪಡೆದ ಜೆ ಸಿ ಐ ಕೊಟ್ಟೂರು ಕಾಟನ್



**ಹಂಪಿ ಟೈಮ್ಸ್ ಕೊಟ್ಟೂರು**

ಪ್ರಧಾನ ಮಂತ್ರಿ 'ಕ್ಷಯ ಮುಕ್ತ ಭಾರತ" ಅಭಿಯಾನದ ಅಡಿಯಲ್ಲಿ ಜೆ ಸಿ ಐ ಕೊಟ್ಟೂರು ಕಾಟನ್ 4 ಜನರನ್ನು ದತ್ತು ಪಡೆದು,ಪ್ರತಿ ತಿಂಗಳು ಅವರಿಗೆ ಆಹಾರ, ಧಾನ್ಯ ಕೊಡುವ ಹೊಣೆ ಹೊತ್ತಿದೆ.ಇದು ಹೆಮ್ಮೆಯ ಸಂಗತಿ , ಅಭಿನಂದನೆ ಎಂದು ಅವರಿಗೆ ವೈದ್ಯಾಧಿಕಾರಿ ಡಾ.ಬದ್ಯನಾಯ್ಕ್ ಮೆಚ್ಚುಗೆ ವ್ಯಕ್ತಪಡಿಸಿದರು.

ಪಟ್ಟಣದ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಮಂಗಳವಾರ ಫಲಾನುಭವಿಗಳಿಗೆ ಆಹಾರ ಧಾನ್ಯಗಳ ಕಿಟ್ಟನ್ನು ದತ್ತು ಪಡೆದ ದಾನಿಗಳ ಮೂಲಕವಿತರಿಸಿ, ನಂತರ ಮಾತನಾಡಿದರು. ಜೆಸಿಐ ಸದಸ್ಯರುಗಳಾದ ಕೇಶವ್ ಪ್ರಸಾದ್, ಸಂತೋಷ್ ಅಟವಾಳಗಿ, ವಿಕ್ರಂ ನಂದಿ ಮೆಡಿಕಲ್ಸ್, ರಾಮಣ್ಣ , ಹೆಗ್ಗಪ್ಪ ಹಳ್ಳಿ ಮತ್ತು ಜೆ ಸಿ ಐ ಅಧ್ಯಕ್ಷರು ನಂದೀಶ್ ತುರಕಾಣಿ ದತ್ತು ಪಡೆಯುವ ಕಾರ್ಯಕ್ಕೆ ಕೈಜೋಡಿಸಿದ್ದಾರೆ ಎಂದು ತಿಳಿಸಿದರು.

ರೋಗದ ಬಗ್ಗೆ ಕಾಳಜಿ, ಮುನ್ನೆಚ್ಚರಿಕೆ ಕ್ರಮಗಳ ಬಗ್ಗೆ ಮಾಹಿತಿ ನೀಡಿ ಎಚ್ಚರವಹಿಸಲು ಸೂಚಿಸಿದರು ಹಾಗೆ ಪ್ರತಿ ತಿಂಗಳು 15ರಿಂದ 20ನೇ ತಾರೀಖಿನ ಒಳಗಾಗಿ ದಾನಿಗಳು ನೀಡುವ ಆಹಾರ, ಧಾನ್ಯಗಳ ಕಿಟ್ಟನ್ನು ಪಲಾನುಭಿಗಳಿಗೆ ತಲುಪಿಸುವುದಾಗಿ ಹೇಳಿದರು.

ಈ ವೇಳೆ ಜೆಸಿಐ ಸದಸ್ಯರು ಈಶ್ವರಪ್ಪ ತುರುಕಾಣೆ,ಪಂಪಾಪತಿ ಅಂಗಡಿ, ಜಗದೀಶ್ ಚಂದ್ರ ಬೋಸ್, ಸಕ್ರಪ್ಪ ರೆಡ್ಡಿ,ವೈದ್ಯಾಧಿಕಾರಿಗಳು, ಆಶಾ ಕಾರ್ಯಕರ್ತೆಯರು ಹಾಜರಿದ್ದರು.


14 ಭಾಷೆಯಲ್ಲಿ ಸುದ್ದಿ, ಲೇಖನ ಓದಿರಿ...
ಈಗ ನಿಮ್ಮ ಮಾತೃ ಭಾಷೆಯಲ್ಲಿ
www.hampitimes.com


Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA